ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಮಾರ್ಚ್ 07, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 295 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999







# ಬರ: ನೀರಿನ ಕೊರತೆಯಾಗದಂತೆ ಕ್ರಮ ವಹಿಸಿ

## ಜಿಲ್ಲೆಯಲ್ಲಿ ಬರ ನಿರ್ವಹಣೆಗೆ ಹಣದ ಕೊರತೆ ಇಲ್ಲ: ಕೆಡಿಪಿ ಸಭೆಯಲ್ಲಿ ಸಚಿವ ಮಲ್ಲಿಕಾರ್ಜುನ್




ದಾವಣಗೆರೆ, ಮಾ.6- ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಎದುರಿಸಲು ಹಣದ ಕೊರತೆ ಇಲ್ಲ. ಎಲ್ಲಿಯೇ ಸಮಸ್ಯೆ ಉಂಟಾದರೂ ತಕ್ಷಣ ಕಾರ್ಯಪ್ರವೃತ್ತರಾಗುವಂತೆ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ತಿ ಕಚೇರಿ ಸಭಾಂಗಣದಲ್ಲಿ ಬುಧವಾರ ಕೆಡಿಪಿ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ, ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ವೇಳೆ ಅವರು ಮಾತನಾಡಿದರು.

ಕುಡಿಯುವ ನೀರಿಗೆ ಎಲ್ಲೂ ಹಾಹಾಕಾರ ಬರಬಾರದು. ಅಗತ್ಯವಿದ್ದರೆ ಬೋರ್‌ವೆಲ್ ಕೊರೆಸಿ ನೀರು ಕೊಡಿ. ಫ್ಲೋರೈಡ್ ಇರುವ ಪ್ರದೇಶದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಿ. ಹಣದ ಸಮಸ್ಯೆ ಇಲ್ಲ. 10 ಕೋಟಿ ರೂಪಾಯಿ ಹಣ ಮೀಸಲಿದೆ ಎಂದರು.

ಜಿಲ್ಲೆಯಲ್ಲಿ ಇಲ್ಲಿಯವರೆಗೆ 22 ಗ್ರಾಮಗಳಲ್ಲಿ 27 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು, ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಪ್ರತಿ ತಹಶೀಲ್ದಾರ್‌ಗಳಿಗೂ ಹಣ ನೀಡಲಾಗಿದೆ ಎಂದು ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್ ಹೇಳಿದರು.

ಚನ್ನಗಿರಿ ಶಾಸಕ ಬಸವರಾಜ ವಿ.ಶಿವಗಂಗಾ ಮಾತನಾಡಿ, ನೀರು ಪೂರೈಕೆಗೆ ಟ್ಯಾಂಕರ್ ಬಳಕೆಗೆ ಅನುಮತಿ ನೀಡಿದ್ದು ಜಿಪಿಎಸ್ ಅಳವಡಿಸಿದ ಟ್ಯಾಂಕರ್ ಬಾಡಿಗೆ ಪಡೆಯಲು ಷರತ್ತು ವಿಧಿಸಿದ್ದು ಇದರಿಂದ ಟ್ಯಾಂಕರ್ ಸಿಗುತ್ತಿಲ್ಲ ಎಂದಾಗ ಯಾವ ಟ್ಯಾಂಕರ್ ಪಡೆಯಲಾಗುತ್ತದೆಯೋ ಅದೇ ಟ್ಯಾಂಕರ್‌ಗೆ ಜಿಪಿಎಸ್ ಅಳವಡಿಸಿಕೊಳ್ಳಬೇಕು ಎಂದು ಸಚಿವರು ಹೇಳಿದರು.

ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ತಲುಪದ ಫಲಾನುಭವಿಗಳನ್ನು ಗುರುತಿಸಿ, ಅಭಿಯಾನ ನಡೆಸಿ, ಆಧಾರ್ ಜೋಡಣೆ, ಬ್ಯಾಂಕ್ ಕೆವೈಸಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತಾಂತ್ರಿಕ ಪರಿಣಿತರೊಂದಿಗೆ ಸಮಸ್ಯೆ ಇತ್ಯಾರ್ಥಕ್ಕೆ ಕ್ರಮ ವಹಿಸುವಂತೆ ಸಚಿವರು ಸೂಚಿಸಿದರು.

ಕೆಲವು ನ್ಯಾಯಬೆಲೆ ಅಂಗಡಿಗಳಲ್ಲಿ ಒಂದು ಕೆ.ಜಿ ವರೆಗೆ ಅಕ್ಕಿಯನ್ನು ಕಡಿಮೆ ಕೊಡುತ್ತಿರುವ ದೂರುಗಳಿವೆ ಎಂದು ಮಾಯಕೊಂಡ ಶಾಸಕ ಕೆ. ಎಸ್.ಬಸವಂತಪ್ಪ ಪ್ರಸ್ತಾಪಿಸಿದಾಗ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಇಲಾಖೆ ಅಧಿಕಾರಿಗಳೊಂದಿಗೆ ಅನಿರೀಕ್ಷಿತ ಭೇಟಿ ನೀಡುವ ಮೂಲಕ ಪರಿಶೀಲನೆ ನಡೆಸಲು ತಿಳಿಸಿ ಪ್ರಮಾಣಕ್ಕಿಂತ ಕಡಿಮೆ ಆಹಾರ ಧಾನ್ಯ ವಿತರಣೆ ಮಾಡುತ್ತಿದ್ದಲ್ಲಿ ಅಂತಹ ನ್ಯಾಯಬೆಲೆ ಅಂಗಡಿಗಳ (4ನೇ ಪುಟಕ್ಕೆ)

### ಕೊನೆ ಭಾಗಕ್ಕೆ ನೀರು ಕೊಟ್ಟು ನಂತರ ಕೆರೆ ತುಂಬಿಸಿಕೊಳ್ಳಿ

ಮೊದಲು ಭದ್ರಾ ನಾಲೆ ಬಲ ದಂಡೆಯ ಕೊನೆ ಭಾಗಕ್ಕೆ ನೀರು ತಲುಪಿಸಿ ನಂತರ ನೀವು ಕೆರೆ ತುಂಬಿಸಿಕೊಳ್ಳಿ ಎಂದು ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಅವರಿಗೆ ಹೇಳಿದರು.

**ಶಿವಗಂಗಾ ಬಸವರಾಜ್‌ಗೆ ಸಚಿವ ಎಸ್ಸೆಸ್ಸೆಂ ಕಿವಿ ಮಾತು**

ಸಭೆಯಲ್ಲಿ ಸೂಳೆಕೆರೆಯಲ್ಲಿ ನೀರು ಕಡಿಮೆ ಇದೆ. ಭದ್ರಾ ನಾಲೆಯಿಂದ ಕೆರೆಗೆ ನೀರು ತುಂಬಿಸುವುದನ್ನು ಬಿಟ್ಟು ಬರೀ ಕೊನೆ ಭಾಗಕ್ಕೆ ನೀರು ತಲುಪಿಸಲು ಆದ್ಯತೆ ನೀಡುತ್ತಿದ್ದೀರಿ ಎಂದು ಶಾಸಕ ಶಿವಗಂಗಾ ಬಸವರಾಜ್ ಜಿಲ್ಲಾಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದು.

ಈ ವೇಳೆ ಸಚಿವರು ಮಧ್ಯಪ್ರವೇಶಿಸಿ, ಕೊನೆಯ ಭಾಗಕ್ಕೆ ನೀರು ಕೊಡಿಸುತ್ತಿಲ್ಲ ಎಂದು ನಿಮ್ಮ ಪಕ್ಕ ಕುಳಿತವರು (ಶಾಸಕ ಬಿ.ಪಿ. ಹರೀಶ್) ನನ್ನ ವಿರುದ್ಧ ಮಾಧ್ಯಮಗಳಲ್ಲಿ (4ನೇ ಪುಟಕ್ಕೆ)

### ನಮಗೂ ಹಸು ಕೊಡಿ ಎಂದ ಶಾಸಕರು

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಮಾರ್ಗದರ್ಶನದಂತೆ ಜಿಲ್ಲಾ ಸಹಕಾರ ಬ್ಯಾಂಕ್ ಸಹಯೋಗದೊಂದಿಗೆ ಸಬ್ಸಿಡಿ ದರದಲ್ಲಿ ತಾಲ್ಲೂಕಿನ 250 ಜನರಿಗೆ 500 ಹಸು ಖರೀದಿಗೆ ನೆರವು ನೀಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಸಭೆಗೆ ತಿಳಿಸಿದರು.

ಈ ವೇಳೆ ಶಾಸಕರುಗಳಾದ ಡಿ.ಜಿ ಶಾಂತನಗೌಡ, ಕೆ.ಎಸ್ ಬಸವಂತಪ್ಪ, ಶಿವಗಂಗಾ ಬಸವರಾಜ್, ಹರೀಶ್ ಅವರುಗಳು ನಮ್ಮ ತಾಲ್ಲೂಕುಗಳಿಗೆ ಏಕೆ ಹಸು ಕೊಟ್ಟಿಲ್ಲ. ನಮಗೂ (4ನೇ ಪುಟಕ್ಕೆ)

### ಹರಿಹರ: ಹೆಚ್ಚುವರಿ 50 ಬೆಡ್ ಆಸ್ಪತ್ರೆಗೆ ಪ್ರಸ್ತಾವನೆ

**ಹರಿಹರದಲ್ಲಿ ಹೆಚ್ಚುವರಿಯಾಗಿ 50 ಬೆಡ್ ಕಟ್ಟಡಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಚಿವರು ಸೂಚಿಸಿದರು.**

**ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಹರಿಹರದ ಸಾರ್ವಜನಿಕ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಹೆಚ್ಚು ಬೆಡ್‌ಗಳ ಕಟ್ಟಡಕ್ಕೆ ಕ್ರಮ ವಹಿಸಿ ಎಂದು ಡಿಹೆಚ್‌ಒ ಅವರಿಗೆ ಸೂಚಿಸಿದರು.**

**ಡಿಹೆಚ್‌ಒ ಮಾತನಾಡಿ, ಪ್ರಸ್ತುತ 100 ಬೆಡ್‌ಗಳ ಆಸ್ಪತ್ರೆ ಇದೆ. ಈಗ 50 ಬೆಡ್‌ಗಳ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಎಂದರು. ಆಗ ಸಚಿವರು, ಮತ್ತೆ 50 ಬೆಡ್‌ಗಳಿಗೆ ಪ್ರಸ್ತಾವನೆ ಸಲ್ಲಿಸಲು ಹೇಳಿದರು.**

### ಶಾಸಕರ ಕರೆ ಸ್ವೀಕರಿಸದ ಸಿಬ್ಬಂದಿ: ಆರೋಪ

**ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಸಮಸ್ಯೆಯಾದರೆ ಅಲ್ಲಿನ ರೋಗಿಗಳು ನಮಗೆ ಫೋನ್ ಮಾಡುತ್ತಾರೆ. ನಾವು ಅಲ್ಲಿದ್ದವರಿಗೆ ಕೊಡಿ ಎಂದಾಗ, ಅಲ್ಲಿದ್ದ ವೈದ್ಯರು, ಸಿಬ್ಬಂದಿಗಳು ನಮ್ಮಜೊತೆ ಮಾತನಾಡದೇ ನಮಗೆ ಅಗೌರವ ತೋರುತ್ತಾರೆ ಎಂದು ಶಾಸಕರುಗಳಾದ ಶಿವಗಂಗಾ ಬಸವರಾಜ್ ಹಾಗೂ ಕೆ.ಎಸ್. ಬಸವಂತಪ್ಪ ಹೇಳಿದರು. ಶಾಸಕರ ಕರೆ ಸ್ವೀಕರಿಸುವಂತೆ ಎಲ್ಲಾ ವೈದ್ಯರು ಹಾಗೂ ಸಿಬ್ಬಂದಿಗಳಿಗೆ ಸುತ್ತೋಲೆ ಕಳುಹಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.**

## 5,8,9 ಹಾಗೂ 11 ನೇ ತರಗತಿಗಳ

# ಪಬ್ಲಿಕ್ ಪರೀಕ್ಷೆ ರದ್ದು

ಬೆಂಗಳೂರು, ಮಾ. 6- ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ 5, 8, 9 ಹಾಗೂ 11ನೇ ತರಗತಿಗಳಿಗೆ ರಾಜ್ಯ ಸರ್ಕಾರ ನಡೆಸಲು ಉದ್ದೇಶಿದ್ದ ಪಬ್ಲಿಕ್ ಪರೀಕ್ಷೆಯನ್ನು ಕರ್ನಾಟಕ ಹೈಕೋರ್ಟ್ ಇಂದಿಲ್ಲಿ ರದ್ದುಪಡಿಸಿದೆ.

ರಾಜ್ಯ ಪಠ್ಯ ಕ್ರಮ ಅನುಸರಿಸುವ ಶಾಲೆಗಳಲ್ಲಿನ ಈ ತರಗತಿಗಳಿಗೆ ರಾಜ್ಯ ಮಟ್ಟದ ಬೋರ್ಡ್ ಪರೀಕ್ಷೆ ನಡೆಸುವಲ್ಲಿ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಗೊಳಿಸಿದೆ.

ಮಕ್ಕಳ ಕಲಿಕೆಗೆ ಅನುಕೂಲ ಎಂಬ ಉದ್ದೇಶದಿಂದ ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸರ್ಕಾರ ಜಂಟಿಯಾಗಿ ಈ ಆದೇಶ ಹೊರಡಿಸಿತ್ತು. ಸರ್ಕಾರದ ಈ ನಿರ್ಧಾರವನ್ನು ಪ್ರಶ್ನಿಸಿ ಅನುದಾನರಹಿತ ಖಾಸಗಿ ಶಾಲೆಗಳ ಒಕ್ಕೂಟ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ರವಿ ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಮಹತ್ವದ ತೀರ್ಪು ನೀಡಿದೆ.

ಶಾಲಾ ಪರೀಕ್ಷೆಗಳನ್ನು ಅಧಿಸೂಚನೆ ರೂಪದಲ್ಲಿ ಜಾರಿಗೆ ತರಲಾಗದು. ಇದು ನಿಯಮಗಳನ್ನು ಅನುಸರಿಸಿ ಕಾಯಿದೆ ಪ್ರಕಾರ ನಡೆಸಬೇಕಾದ ಪ್ರಕ್ರಿಯೆ. ಅಷ್ಟೇ ಅಲ್ಲ, ಸರ್ಕಾರದ ವಿವೇಚನೆಗೂ ಬಿಟ್ಟ ವಿಚಾರವಲ್ಲ ಎಂದು ಅರ್ಜಿದಾರರು ವಾದ ಮಂಡಿಸಿದ್ದರು.

ಅಷ್ಟೇ ಅಲ್ಲ ಸರ್ಕಾರವೇ ಸ್ವಯಂ ಪ್ರೇರಿತವಾಗಿ ತೀರ್ಮಾನ ಕೈಗೊಳ್ಳಲಾಗದು. ಕಡ್ಡಾಯ ನಿಯಮವನ್ನೇ ಮಾಡಿಲ್ಲ ಎಂದು ಆಕ್ಷೇಪಿಸಿದ್ದರು.

ನ್ಯಾಯಪೀಠ ಅರ್ಜಿದಾರರ ವಾದವನ್ನು ಪುರಸ್ಕರಿಸಿ ಸರ್ಕಾರದ ಆದೇಶವನ್ನು ರದ್ದುಗೊಳಿಸಿತು.

ಕೋವಿಡ್ ನಂತರದ ದಿನಗಳಲ್ಲಿ ಮಕ್ಕಳ ಕಲಿಕೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಗೂ ಮುನ್ನ ನಾಲ್ಕು ಹಂತಗಳಲ್ಲಿ ಪಬ್ಲಿಕ್ ಪರೀಕ್ಷೆ ನಡೆಸಲು ಸರ್ಕಾರ ತೀರ್ಮಾನ ಕೈಗೊಂಡು ಆದೇಶ ಹೊರಡಿಸಿತ್ತು.

ಇದುವರೆಗೂ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಿಗಷ್ಟೇ ಬೋರ್ಡ್ ಪರೀಕ್ಷೆಗಳು ನಡೆಯುತ್ತಿದ್ದವು. ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಗಳನ್ನು ನಡೆಸಲು ಹಾಗೂ ವಿದ್ಯಾರ್ಥಿಗಳನ್ನು ಆಕರ್ಷಿಸಲು ಶ್ರೇಣೀಕೃತ ತೇರ್ಗಡೆ ನೀಡುತ್ತಿದ್ದವು.

ಸರ್ಕಾರಿ ಅನುದಾನಿತ, ಸರ್ಕಾರಿ ಶಾಲೆಗಳ ಜೊತೆಗೆ ಖಾಸಗಿ ಅನುದಾನರಹಿತ ಶಾಲೆಗಳ ಮಕ್ಕಳು ಕೆಲವು ಘಟ್ಟಗಳಲ್ಲಿ ಬೋರ್ಡ್ ಪರೀಕ್ಷೆ ಬರೆಯಬೇಕೆಂದು ಸರ್ಕಾರ ತೀರ್ಮಾನ ಕೈಗೊಂಡಿತ್ತು. ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸುವುದರಿಂದ ಅವರ ಕಲಿಕೆಯಲ್ಲಿ ಗಂಭೀರತೆ ಕಾಣಬಹುದೆಂಬ ಅಭಿಪ್ರಾಯ ಹೊಂದಿತ್ತು. ರಾಜ್ಯ ಸರ್ಕಾರ ಕಳೆದ ಡಿಸೆಂಬರ್‌ನಲ್ಲಿ ಹೊರಡಿಸಿದ್ದ (2ನೇ ಪುಟಕ್ಕೆ)



ದಾವಣಗೆರೆ ಗಾಜಿನ ಮನೆ ಆವರಣದಲ್ಲಿ ನಿರ್ಮಿಸಲಾಗಿರುವ 'ಹೆಣ್ಣು ಮಗುವಿನ ವನ'ವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಬುಧವಾರ ಉದ್ಘಾಟಿಸಿದರು.

### 2-3 ದಿನಗಳಲ್ಲಿ ಕಾಂಗ್ರೆಸ್ ಪಟ್ಟಿ : ಸಿದ್ದರಾಮಯ್ಯ

ಬೆಂಗಳೂರು, ಮಾ. 6 – ಮುಂಬರುವ ಲೋಕಸಭಾ ಚುನಾವಣೆಗೆ ರಾಜ್ಯದ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ಎರಡು ಮೂರು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸ್ಥಳೀಯ ನಾಯಕರ ಅಭಿಪ್ರಾಯ ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಇದರಲ್ಲಿ ಯಾವುದೇ ವಿವಾದ ಇರುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಗುರುವಾರ ರಾಜಧಾನಿ ದೆಹಲಿಯಲ್ಲಿ ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ನಂತರ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

### ಜಯಲಲಿತಾ ಆಭರಣ ಹಸ್ತಾಂತರಕ್ಕೆ ತಡೆ

ಬೆಂಗಳೂರು, ಮಾ. 6 – ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಅವರಿಗೆ ಸೇರಿದ ಬಂಗಾರ ಹಾಗೂ ವಜ್ರದ ಆಭರಣಗಳನ್ನು ತಮಿಳುನಾಡಿಗೆ ಹಸ್ತಾಂತರಿಸುವ ಪ್ರಕ್ರಿಯೆಗೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಜಯಲಲಿತಾ ಅವರ ಸಂಬಂಧಿ ಜೆ. ದೀಪಾ ದಾಖಲಿಸಿದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠದ ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರು, ಮಾರ್ಚ್ 26ರವರೆಗೆ ತಡೆಯಾಜ್ಞೆ ಹೊರಡಿಸಿದ್ದಾರೆ.

ಜಯಲಲಿತಾ ವಿರುದ್ಧ ಅಕ್ರಮ ಆಸ್ತಿ ಪ್ರಕರಣ ದಾಖಲಿಸಲಾಗಿತ್ತು. ಈ ಪ್ರಕರಣದ ಸಂಬಂಧ ಹಲವಾರು ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಆಸ್ತಿಯನ್ನು ತಮಿಳುನಾಡು (4ನೇ ಪುಟಕ್ಕೆ)

# ಕ್ಯಾನ್ಸರ್ ತಪಾಸಣೆ ಶೇ.1ಕ್ಕಿಂತ ಕಡಿಮೆ

## ಬಾಪೂಜಿ ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ವಿಷಾದ



ದಾವಣಗೆರೆ, ಮಾ. 6 - ಕರ್ನಾಟಕದಲ್ಲಿ ಪ್ರತಿ ವರ್ಷ ಕ್ಯಾನ್ಸರ್ ರೋಗಿಗಳ ಪ್ರಮಾಣ ಶೇ.1ರಷ್ಟು ಹೆಚ್ಚಾಗುತ್ತಿದೆ. ಆದರೂ, ಸ್ಥನ ಕ್ಯಾನ್ಸರ್ ಹಾಗೂ ಗರ್ಭಕಂಠ ಕ್ಯಾನ್ಸರ್‌ಗಳ ತಪಾಸಣೆ ಪ್ರಮಾಣ ಶೇ.1ಕ್ಕಿಂತ ಕಡಿಮೆ ಇದೆ ಎಂದು ಎಸ್.ಎಸ್. ಕೇರ್ ಟ್ರಸ್ಟ್‌ನ ಟ್ರಸ್ಟೀ ಹಾಗೂ ಬಾಪೂಜಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ವಿಷಾದಿಸಿದ್ದಾರೆ.

ನಗರದ ಬಿಐಇಟಿ ಕಾಲೇಜಿನಲ್ಲಿ ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಕ್ಯಾನ್ಸರ್ ಕಾಳಜಿ - ಕ್ಯಾನ್ಸರ್ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

35 ವರ್ಷದ ನಂತರ ಮಹಿಳೆಯರು ಕ್ಯಾನ್ಸರ್ ಕುರಿತು ನಿಯಮಿತ ತಪಾಸಣೆಗೆ ಒಳಪಡಬೇಕು. ಈ ಬಗ್ಗೆ ಸಾಕಷ್ಟು ಮಹಿಳೆಯರಲ್ಲಿ ಅರಿವಿಲ್ಲ. ಇದರಿಂದಾಗಿ ನಾಲ್ಕನೇ ಹಂತಕ್ಕೆ ಕ್ಯಾನ್ಸರ್ ತಲುಪಿದ ನಂತರ ಚಿಕಿತ್ಸೆಗೆ ಬರುತ್ತಿದ್ದಾರೆ. ಆ ಹಂತದಲ್ಲಿ ಜೀವಕ್ಕೆ ಅಪಾಯ ಹೆಚ್ಚಾಗಿರುತ್ತದೆ ಎಂದವರು ಹೇಳಿದರು.

ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಹೆಚ್ಚು ಸುಲಭ. ಈ ಹಿನ್ನೆಲೆಯಲ್ಲಿ ಕ್ಯಾನ್ಸರ್ ಕುರಿತು ಅರಿವು ಮೂಡಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ. ಕೆ.ಆರ್. ರಸ್ತೆಯಲ್ಲಿರುವ ಎಸ್.ಎಸ್. ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಉಚಿತ ತಪಾಸಣೆ ಸಹ ಕೈಗೊಳ್ಳಲಾಗುತ್ತಿದೆ ಎಂದು ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. (2ನೇ ಪುಟಕ್ಕೆ)

### ಆಟದೊಂದಿಗೆ ತಿಳುವಳಿಕೆ, ಕ್ಯಾನ್ಸರ್ ಅರಿವು

**ಕ್ಯಾನ್ಸರ್ ಕಾಳಜಿ ಕಾರ್ಯಕ್ರಮದ ಸಂದರ್ಭದಲ್ಲಿ ಆಟದೊಂದಿಗೆ ರೋಗಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.**

**ವಿವಿಧ ರೀತಿಯ ಕ್ಯಾನ್ಸರ್ ಕುರಿತು ಮಾಹಿತಿ ನೀಡುವ ಹಾಗೂ ಎಚ್ಚರಿಕೆ ವಹಿಸುವ ಕುರಿತು ತಿಳುವಳಿಕೆ ನೀಡಲಾಯಿತು.**

**ವಿ.ಆರ್. ಉಪಕರಣದ ಮೂಲಕ ವೈದ್ಯಕೀಯ ವಲಯದ ಮಾಹಿತಿ ನೀಡುವ ಪ್ರಯತ್ನವೂ ಗಮನ ಸೆಳೆಯಿತು.**

**ಹೆಚ್.ಐ.ವಿ. ಪೀಡಿತ ಮಕ್ಕಳು ರೂಪಿಸಿದ್ದ ಗ್ರೀಟಿಂಗ್ ಕಾರ್ಡ್‌ಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಇರಿಸಲಾಗಿತ್ತು. ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ನಡೆಸಲಾದ ಶಿಬಿರಗಳ ಚಿತ್ರಗಳನ್ನು ಮರದ ಆಕೃತಿಯಲ್ಲಿ ಅಳವಡಿಕೆ ಮಾಡಿದ್ದು ಆಕರ್ಷಕವಾಗಿತ್ತು.**

# ರಾಜ್ಯದಿಂದ ಸೈಬರ್ ಸೆಕ್ಯೂರಿಟಿ ನೀತಿ ಜಾರಿ

ಬೆಂಗಳೂರು, ಮಾ. 6 - ಸೈಬರ್ ಅಪರಾಧ ತಡೆಗೆ ರಾಜ್ಯ ಸರ್ಕಾರ ಸದ್ಯದಲ್ಲೇ ಸೈಬರ್ ಸೆಕ್ಯೂರಿಟಿ ಪಾಲಿಸಿ ಜಾರಿಗೆ ತರಲಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸೈಬರ್ ಭದ್ರತೆ ಕುರಿತು ಸೈಬರ್ ಅಪರಾಧ ತನಿಖಾ ಶೃಂಗಸಭೆ-2024 ಉದ್ಘಾಟಿಸಿ ಮಾತನಾಡಿದ ಅವರು, ಡಿಜಿಟಲ್ ಸೇವೆಗಳ ಯುಗದಲ್ಲಿ ಯಾವುದೇ ವ್ಯವಸ್ಥೆ ಬಳಸುವ ಮುನ್ನ ಸೈಬರ್ ಸುರಕ್ಷತೆ ಮತ್ತು ಭದ್ರತೆ ಕುರಿತು ಅರಿತುಕೊಳ್ಳುವುದು ಅಗತ್ಯವಿದೆ ಎಂದರು.

ಸರ್ಕಾರದ ಹಲವು ಇಲಾಖೆಗಳು ಜನರಿಗೆ ಸುಲಭವಾಗಿ ಸೇವೆ ಒದಗಿಸಲು ಡಿಜಿಟಲ್ ಮೊರೆ ಹೋಗುತ್ತಿವೆ, ಸೇವಾ ಸಿಂಧು, ಮೊಬೈಲ್ ಬ್ಯಾಂಕಿಂಗ್, ವರ್ಚ್ಯುವಲ್ ಕ್ಲಾಸ್‌ಗಳು ಸೇರಿದಂತೆ ವಿವಿಧ ರೀತಿಯ ಡಿಜಿಟಲ್‌ವ್ಯವಸ್ಥೆಅಳವಡಿಸಿಕೊಳ್ಳಲಾಗುತ್ತಿದೆ. ಇದಕ್ಕೂ ಮುನ್ನ ಸೈಬರ್ ಸುರಕ್ಷತೆ ಮತ್ತು ಭದ್ರತೆ ಬಗ್ಗೆ ಗಮನಹರಿಸಬೇಕು ಎಂದರು.

ಸೈಬರ್ ವಂಚನೆಗೊಳಗಾದ ಜನರಿಗೆ ಸುರಕ್ಷತೆ ಒದಗಿಸುವ ಕೆಲಸವನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 43 ಸೈಬರ್ ಕ್ರೈಮ್ ಪೊಲೀಸ್ ಠಾಣೆಗಳು ಮಾಡುತ್ತಿವೆ.

ಡಿಜಿಟಲ್ ಜಗತ್ತಿನಲ್ಲಿ ಸೈಬರ್ ಅಪರಾಧಿಗಳು ಹ್ಯಾಕಿಂಗ್ ಮೂಲಕ ತಮ್ಮ ಉದ್ದೇಶ ಈಡೇರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ದತ್ತಾಂಶ ಸುರಕ್ಷಿತವಾಗಿ ಕಾಪಾಡಿಕೊಳ್ಳುವುದೇ ಸೈಬರ್ ಅಪರಾಧಗಳಿಗೆ ಪರಿಹಾರವಾಗಿದ್ದು, ಜನತೆ ಈ ಬಗ್ಗೆ ಹೆಚ್ಚು ಅರಿವು ಮೂಡಿಸಿಕೊಳ್ಳಬೇಕು ಎಂದು ಸಚಿವರು ಹೇಳಿದರು.

ಸೈಬರ್ ಕ್ರೈಂ ವಿಭಾಗದ ಬಲ ಹೆಚ್ಚಿಸಲು ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ, ಕ್ಲೌಡ್ ಕಂಪ್ಯೂಟಿಂಗ್ ಸೇರಿದಂತೆ ವಿವಿಧ ತಂತ್ರಜ್ಞಾನ ವಲಯಗಳಲ್ಲಿ ಪರಿಣಿತಿ ಹೊಂದಿರುವ ಕಂಪನಿಗಳ ನೆರವಿನೊಂದಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. ಪೊಲೀಸ್, ನ್ಯಾಯಾಂಗ ಮತ್ತು ಭಾರತೀಯ ರಕ್ಷಣಾ ಪಡೆಗಳ 33 ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳು (4ನೇ ಪುಟಕ್ಕೆ)

# ಸವಳಂಗ ಕೆರೆ ವ್ಯಾಪ್ತಿಯ 7 ಹಳ್ಳಿಗಳಿಗೆ 10 ದಿನಗಳು 30 ಎಮ್‌ಸಿಎಫ್‌ಟಿ ನೀರು ಬಿಡಲು ತೀರ್ಮಾನ

**ಶಾಸಕರಾದ ಡಿ.ಜಿ. ಶಾಂತನಗೌಡ, ಶಾರದಾ ಪೂರ್ಯಾನಾಯ್ಕ ನೇತೃತ್ವದಲ್ಲಿ ನಡೆದ ಸಭೆ**

ಹೊನ್ನಾಳಿ, ಮಾ. 6- ನ್ಯಾಮತಿ ತಾಲ್ಲೂಕಿನ ಸವಳಂಗ ಕಾಯಕ ಕೆರೆ (ಹೊಸಕೆರೆ) ಯ ಅಚ್ಚುಕಟ್ಟು ವ್ಯಾಪ್ತಿಯ ಹಳ್ಳಿಗಳ ಬೆಳೆಗಳು ಒಣಗುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಡಿ.ಜಿ.ಶಾಂತನಗೌಡ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಿಂಗಳಲ್ಲಿ 10 ದಿನಗಳು ಕಾಲ 30 ಎಮ್‌ಸಿಎಫ್‌ಟಿ ನೀರು ಬಿಡಬೇಕೆಂದು ತೀರ್ಮಾನ ಕೈಕೊಳ್ಳಲಾಯಿತು.

ಬುಧವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶಾಂತನಗೌಡರೊಂದಿಗೆ ಶಿವಮೊಗ್ಗ ಗ್ರಾಮಾಂತರ ಶಾಸಕಿ ಶಾರದಾ ಪೂರ್ಯಾನಾಯ್ಕ, ದಾವಣಗೆರೆ ಜಿಲ್ಲಾಧಿಕಾರಿ ವೆಂಕಟೇಶ್, ದಾವಣಗೆರೆ ಸಿಇಒ ಸುರೇಶ್ ಇಟ್ನಾಳ್, ಹೊನ್ನಾಳಿ ಉಪವಿಭಾಗದ ಎಸಿ ಅಭಿಷೇಕ್, ಶಿವಮೊಗ್ಗ ಎಸಿ ಹಾಗೂ ಇಂಜಿನಿಯರ್ ಸಮ್ಮುಖದಲ್ಲಿ ಕೆರೆ ಅಚ್ಚುಕಟ್ಟು ವ್ಯಾಪ್ತಿಯ ರೈತರ ಸಭೆ ನಡೆಸಲಾಯಿತು.

ಮಾ. 2 ರ ಶನಿವಾರದಂದು ಶಿವಮೊಗ್ಗ ಜಿಲ್ಲಾ ಮಾಂಡ್ರಳ್ಳಿ, ಮಲ್ಲಾಪುರ, ಸುತ್ತುಕೋಟಿ ಗ್ರಾಮದವರು ನ್ಯಾಮತಿ ತಾಲ್ಲೂಕಿನ ಸವಳಂಗದ ಗ್ರಾಮದ ಹೊಸಕೆರೆಯ ನೀರು ಹರಿಯುವುದಕ್ಕೆ ಗೇಟ್ ಹಾಕಿ ತಡೆದಿದ್ದರು. ನ್ಯಾಮತಿ ತಾಲೂಕಿನ ಸವಳಂಗ, ಸೋಗಿಲು, ಚಟ್ನಹಳ್ಳಿ, ಗಂಜೀನಹಳ್ಳಿ, ಕಂಚಿಗನಾಳ್, ಕೋಡಿಕೊಪ್ಪ ಸೇರಿದಂತೆ ಇತರೆ ಗ್ರಾಮಗಳ ಬೇಸಿಗೆ ಬೆಳೆಗಳು ಹಾನಿಯಾಗುವ ಬಗ್ಗೆ ಮಾಹಿತಿ ಯನ್ನು ರೈತರು ಶಾಸಕರಿಗೆ ಗಮನಕ್ಕೆ ತಂದಿದ್ದರು. ಹಾಗಾಗಿ ಬುಧವಾರ ಸಭೆ ನಡೆದಿದೆ.

ದಾವಣಗೆರೆ, ಶಿವಮೊಗ್ಗ ಇಂಜಿನಿಯರ್ ಹೊರತುಪಡಿಸಿ ಬೇರೆ (4ನೇ ಪುಟಕ್ಕೆ)

# ಮಲೇಬೆನ್ನೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಶೀಘ್ರ ಮೇಲ್ದರ್ಜೆಗೆ : ಶಾಸಕ ಬಿ.ಪಿ.ಹರೀಶ್ ಭರವಸೆ



ಮಲೇಬೆನ್ನೂರು, ಮಾ.6- ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಜಿ+1 ಮಾದರಿಯಲ್ಲಿ ಎರಡು ಕೊಠಡಿ ನಿರ್ಮಾಣಕ್ಕೆ ಬುಧವಾರ ಶಾಸಕ ಬಿ.ಪಿ. ಹರೀಶ್ ಅವರು ಗುದ್ದಲಿ ಪೂಜೆ ನೆರವೇರಿಸಿ, ಕಾಮಗಾರಿಗೆ ಚಾಲನೆ ನೀಡಿದರು.

ಇದೇ ವೇಳೆ ಪ್ರೌಢಶಾಲೆ ವಿಭಾಗದ ನೂತನ ಶಾಲಾ ಕೊಠಡಿಯನ್ನು ಶಾಸಕ ಹರೀಶ್ ಉದ್ಘಾಟಿಸಿ ಶುಭ ಹಾರೈಸಿದರು.

ನಂತರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಹರೀಶ್ ಅವರು, ಸರ್ಕಾರ ಈ ವರ್ಷ ಪ್ರತಿ ತಾಲ್ಲೂಕಿಗೆ 2 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ನೀಡುವ ಸಾಧ್ಯತೆ ಇದ್ದು, ಮಲೇಬೆನ್ನೂರಿನ ಈ ಕಾಲೇಜನ್ನು ಕರ್ನಾಟಕ ಪಬ್ಲಿಕ್ ಶಾಲೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ಶಿಫಾರಸ್ಸು ಮಾಡುವುದಾಗಿ ಹೇಳಿದರು.

ಸರ್ಕಾರಗಳು ಎಲ್ಲಾ ಮಕ್ಕಳು ಶಿಕ್ಷಣವಂತರಾಗಬೇಕೆಂಬ ಉದ್ದೇಶದಿಂದ ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತಿದ್ದು, ವಿದ್ಯಾರ್ಥಿಗಳೂ ಕೂಡಾ ಚೆನ್ನಾಗಿ ಓದಿ ಶಾಲೆಗೆ ಮತ್ತು ಪೋಷಕರಿಗೆ ಕೀರ್ತಿ ತರಬೇಕೆಂದು ಹರೀಶ್ ಹೇಳಿದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಆನಂದಾ ಚಾರ್, ಸದಸ್ಯರಾದ ಬಟ್ಟೆ ಅಂಗಡಿ ವಿಶ್ವ, ವೀರೇಶ್, ಬಸವ ರಾಜ್, ಪುರಸಭೆ ಸದಸ್ಯರಾದ ಷಾ ಅಬ್ರಾರ್, ಬೆಣ್ಣೆಹಳ್ಳಿ ಸಿದ್ದೇಶ್, ಬಿ.ಮಂಜುನಾಥ್, ಮಾಜಿ ಸದಸ್ಯರಾದ ಭಾನುವಳ್ಳಿ ಸುರೇಶ್, ಪಿ.ಆರ್.ರಾಜು, ಎ.ಕೆ.ಲೋಕೇಶ್, ಪ್ರೌಢ ಶಾಲೆಯ ಉಪಪ್ರಾಚಾರ್ಯ ಜಗದೀಶ್, ಉಜ್ಜಮ್ಮನವರ್, ಪ್ರೌಢಶಾಲೆ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಓ.ಜಿ. ಮಂಜುನಾಥ್, ಸದಸ್ಯ ಸದಾನಂದ್, ಭೋವಿ ಮಂಜಣ್ಣ, ನ್ಯಾಯಬೆಲೆ ಅಂಗಡಿ ಮಂಜಣ್ಣ, ಪಾಳೇಗಾರ್ ನಾಗರಾಜ್, ಸುಣಗಾರ್ ಮಂಜಣ್ಣ, ನಿರ್ಮಿತಿ ಕೇಂದ್ರದ ಇಇ ರವಿ, ಗುತ್ತಿಗೆದಾರ ಜಿ.ಪಿ. ಮಂಜುನಾಥ್ ಮತ್ತಿತರರು ಈ ವೇಳೆ ಹಾಜರಿದ್ದರು.

ಉಪನ್ಯಾಸಕ ತಿಪ್ಪೇಸ್ವಾಮಿ ಸ್ವಾಗತಿಸಿದರು. ದೈಹಿಕ ಶಿಕ್ಷಕ ಜಿ ಹಾಲಪ್ಪ ವಂದಿಸಿದರು.

# ಮತ ನಮ್ಮದು, ನಾಯಕತ್ವ ಇನ್ಯಾರ ಬಳಿಯೋ ಇದೆ

## ದಲಿತರು ಮುಖ್ಯಮಂತ್ರಿಯಾಗಿಲ್ಲ ಎಂದು ಸಚಿವ ಮಹದೇವಪ್ಪ ಅಸಮಾಧಾನ



ಬೆಂಗಳೂರು, ಮಾ. 6 - ಲೋಕಸಭೆ ಚುನಾವಣೆ ಹೊತ್ತಿನಲ್ಲಿ ಕಾಂಗ್ರೆಸ್‌ನಲ್ಲಿ ಮತ್ತೆ ದಲಿತ ಮುಖ್ಯಮಂತ್ರಿ ವಿಷಯ ಚರ್ಚೆಗೆ ಬಂದಿದೆ. ಸಚಿವ ಹೆಚ್.ಸಿ. ಮಹದೇವಪ್ಪ ಅವರು ದಲಿತರು ಮುಖ್ಯಮಂತ್ರಿಯಾಗಲಿ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಎಸ್.ಸಿ. - ಎಸ್.ಟಿ. ನೌಕರರ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಪಕ್ಷಕ್ಕೆ ಒಗ್ಗಟ್ಟಾಗಿ ಮತ ನೀಡಿದ ನಂತರವೂ ಮುಖ್ಯಮಂತ್ರಿ ಸ್ಥಾನ ಕೊಡಿ ಎಂದು ಕೇಳುವ ಪರಿಸ್ಥಿತಿ ನಮ್ಮದಾಗಿದೆ ಎಂದಿದ್ದಾರೆ.

ನಾನು, ಸಚಿವರಾದ ಪರಮೇಶ್ವರ್, ಪ್ರಿಯಾಂಕ್ ಖರ್ಗೆ ನೀತಿ ರೂಪಿಸುವ ಸ್ಥಾನದಲ್ಲಿಲ್ಲ. ನಾವು ನಾಯಕತ್ವ ಬೆಳೆಸದೇ ಇರುವುದೇ ಇದಕ್ಕೆ ಕಾರಣ ಎಂದು ಪರಮೇಶ್ವರ್ ತಿಳಿಸಿದರು. ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ ಹಾಗೂ ಹೆಚ್.ಡಿ. ದೇವೇಗೌಡರು ಯಾಕೆ ಮುಖ್ಯಮಂತ್ರಿ ಯಾದರು? ಮತ ನಮ್ಮದಿದೆ, ನಾಯಕತ್ವ ಇನ್ಯಾರ ಬಳಿಯೋ ಇದೆ. ಇದಕ್ಕೆ ನಾವು ನಮ್ಮ ನಾಯಕತ್ವ ಬೆಳೆಸದಿರುವುದೇ ಕಾರಣ ಎಂದು ಬೇಸರದಿಂದ ಹೇಳಿದರು.

ಈ ವಿಷಯ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗುತ್ತಿದ್ದಂತೆ, ಉಲ್ಟಾ ಹೊಡೆದಿರುವ ಸಚಿವರು, ನಾನು ಕಾಂಗ್ರೆಸ್ ಪಕ್ಷದ ಬಗ್ಗೆ ಮಾತನಾಡಿಲ್ಲ. ಎಲ್ಲಾ ಪಕ್ಷಗಳ ಬಗ್ಗೆ ಮಾತನಾಡಿದ್ದೇನೆ ಎಂದಿದ್ದಾರೆ.

ದಲಿತರು ನೀತಿ ರೂಪಿಸುವ ಸ್ಥಾನದಲ್ಲಿರಬೇಕು ಎಂಬುದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತು. ಅದನ್ನೇ ನಾನೂ ಹೇಳಿದ್ದೇನೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಆಯಾ ಜಾತಿಯವರು ತಮ್ಮ ನಾಯಕನ ಹಿಂದೆ ಹೋಗ್ತಾರೆ. ನೀವು (ಪರಿಶಿಷ್ಟರು) ಮತ ಹಾಕಿ ಸುಮ್ಮನಾಗಿ ಬಿಡುತ್ತೀರ. ನಾವು ಮತ ಹಾಕಿ ಬೇರೆಯವರ ಮುಂದೆ ಕೈಜೋಡಿಸುತ್ತೇವೆ. ನಮ್ಮಿಂದ ಮತ ಪಡೆದವರು ನಮ್ಮ ಮೇಲೆ ಆಡಳಿತ ಮಾಡ್ತಾರೆ. ಅದಕ್ಕಾಗಿ ಒಗ್ಗಟ್ಟಾಗಿ ಅಂತ ಹೇಳಿದ್ದು ಎಂದು ಸ್ಪಷ್ಟಪಡಿಸಿದ್ದಾರೆ.

ಬಹುಜನರು ಒಂದಾಗಿರುವುದಕ್ಕೆ ಕಾಂಗ್ರೆಸ್ ಗೆಲ್ಲುತ್ತಿದೆ. ಬೇಕಾದಷ್ಟು ದಲಿತರಿಗೆ ಕಾಂಗ್ರೆಸ್ ಮುಖ್ಯಮಂತ್ರಿ ಮಾಡಿದೆ. ಬೇರೆ ಪಕ್ಷದವರೂ ಕೂಡ ಮುಖ್ಯಮಂತ್ರಿ ಮಾಡಬೇಕು. ಈ ಸಮುದಾಯಗಳ ಕುರಿತು ಮಾತನಾಡಿದ್ದೇನೆ ಎಂದಿದ್ದಾರೆ.

# 16 ರಂದು ರಾಷ್ಟ್ರೀಯ ಲೋಕ ಅದಾಲತ್



**ಹರಪನಹಳ್ಳಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ**

ಹರಪನಹಳ್ಳಿ, ಮಾ. 6 - ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು, ಇವರ ನಿರ್ದೇಶನದಂತೆ ಇದೇ ದಿನಾಂಕ 9 ರಂದು ನಡೆಯಬೇಕಾಗಿದ್ದ ರಾಷ್ಟ್ರೀಯ ಲೋಕ ಅದಾಲತ್ತನ್ನು ಇದೇ ದಿನಾಂಕ 16 ಕ್ಕೆ ಮುಂದೂಡಲಾಗಿದ್ದು, ಸಾರ್ವಜನಿಕರು, ಕಕ್ಷಿದಾರರು ಹಾಗೂ ವಕೀಲರುಗಳು ಸಹಕರಿಸಬೇಕಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ತಿಳಿಸಿದರು.

ಪಟ್ಟಣದ ನ್ಯಾಯಾಲಯ ಆವರಣದ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಈ ವಿಷಯ ತಿಳಿಸಿದರು.

ರಾಷ್ಟ್ರೀಯ ಲೋಕ ಅದಾಲತ್ತನ್ನು ರಾಜೀಯಾಗಬಹುದಾದ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಾದ ಪಾಲು ವಿಭಾಗ, ಮೋಟರ್ ವಾಹನ ಅಪಘಾತ ಪರಿಹಾರ ವ್ಯಾಜ್ಯಗಳು, ಚೆಕ್ ಬೌನ್ಸ್ ಪ್ರಕರಣಗಳು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿಯಾ ಗಬಹುದಾದ ಇತ್ಯರ್ಥಪಡಿಸಿ ಕೊಳ್ಳಲು ಅವಕಾಶ ಇದೆ. ಹರಪನಹಳ್ಳಿಯ ಉಭಯ ನ್ಯಾಯಾಲಯಗಳಲ್ಲಿ ಡೆಯುವ ಲೋಕ ಅದಾಲತ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಾಜಿಯಾಗಬ ಹುದಾದ ವ್ಯಾಜ್ಯಗಳನ್ನು ಇತ್ಯರ್ಥ ಪಡಿಸಿಕೊಳ್ಳಬೇಕೆಂದು ಈ ಮೂಲಕ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೆಹಲಿ : ಬಿಜೆಪಿ ಶಾಸಕರ ಅಮಾನತ್ತು ರದ್ದುಗೊಳಿಸಿದ ಹೈಕೋರ್ಟ್

ನವದೆಹಲಿ, ಮಾ. 6 – ದೆಹಲಿಯ ಬಜೆಟ್ ಅಧಿವೇಶನದ ಆರಂಭದಲ್ಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಭಾಷಣಕ್ಕೆ ಅಡ್ಡಿಪಡಿಸಿದ ಕಾರಣಕ್ಕೆ ಬಿಜೆಪಿ ಏಳು ಶಾಸಕರ ಅಮಾನತ್ತು ಮಾಡಿದ ಕ್ರಮವನ್ನು ದೆಹಲಿ ಹೈಕೋರ್ಟ್ ತಳ್ಳಿ ಹಾಕಿದೆ. ಸದನದ ಹಕ್ಕು ಸಮಿತಿ ಪ್ರಕ್ರಿಯೆ ಪೂರ್ಣಗೊಳಿಸು ವವರೆಗೆ ಶಾಸಕರನ್ನು ಅಮಾನತ್ತುಗೊಳಿಸಲಾಗಿತ್ತು. ಅಮಾನತ್ತು ಕ್ರಮವನ್ನು ಪ್ರಶ್ನಿಸಿ ಶಾಸಕರು ಹೈಕೋರ್ಟ್ ಮೊರೆ ಹೋಗಿದ್ದರು. ಹಕ್ಕು ಸಮಿತಿ ಪ್ರಕ್ರಿಯೆ ಪೂರ್ಣ ಗೊಳಿಸುವವರೆಗೂ ಅಮಾನತ್ತು ಮಾಡಿರುವುದು ನಿಯ ಮಗಳ ಉಲ್ಲಂಘನೆ ಎಂದು ಶಾಸಕರು ವಾದ ಮಂಡಿಸಿದ್ದರು.

## ಮಲೆಕುಂಬಳೂರಿನಲ್ಲಿ ಇಂದು ಎಜುಕೇಶನಲ್ ಫೌಂಡೇಶನ್ ಉದ್ಘಾಟನೆ

ಹೊನ್ನಾಳಿ ತಾಲ್ಲೂಕಿನ ಮಲೆಕುಂಬಳೂರು ಗ್ರಾಮದ ಶ್ರೀ ಆಂಜನೇಯಸ್ವಾಮಿ ಮಹಾರಥೋತ್ಸವದ ಅಂಗವಾಗಿ ಇಂದು ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಸತಿ ಪತಿಗಳಾಗುವವವರಿಗೆ ಉಚಿತವಾಗಿ ಮಾಂಗಲ್ಯಗಳನ್ನು ಕೊಡುವ ಮೂಲಕ ಶ್ರೀ ಪವನಸುತ ಸೇವಾ ಅಮ್ಮ ಎಜುಕೇಶನಲ್ ಫೌಂಡೇಶನ್ ಉದ್ಘಾಟನೆ ಮಾಡಲಾಗುವುದು ಎಂದು ಫೌಂಡೇಶನ್ ಕಾರ್ಯದರ್ಶಿ ಕೆ.ಬಿ. ಮಂಜಪ್ಪ ತಿಳಿಸಿದ್ದಾರೆ.



# ಧನರಾಜ್ ಅವರ ಕೃತಿ ಬಿಡುಗಡೆ

ಮಲೇಬೆನ್ನೂರು, ಮಾ.6- ಬೆಂಗಳೂರಿನ ಕನ್ನಡ ಭವನದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಹರಿಹರದ ಯುವ ಬರಹಗಾರ ಆರ್.ಧನರಾಜ್ ಅವರ 'ತೋಚಿದಷ್ಟೇ.. ಗೀಚಿದ್ದು' ಕೃತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ್ ಎಸ್.ತಂಗಡಗಿ, ಖ್ಯಾತ ಸಾಹಿತಿ, ಚಿಂತಕ ನಾಡೋಜ ಡಾ. ಬರಗೂರು ರಾಮಚಂದಪ್ಪ ಅವರು ಬಿಡುಗಡೆ ಮಾಡಿದರು.

ಈ ವೇಳೆ ಧನರಾಜ್ ಅವರನ್ನು ಸರ್ಕಾರದಿಂದ ಸನ್ಮಾನಿಸಿ, ಅಭಿನಂದಿಸಿ, ಪ್ರೋತ್ಸಾಹಿಸಲಾಯಿತು. ಲೇಖಕ ಜೋಗಿ, ಡಾ. ಧರಣಿದೇವಿ ಮಾಲಗತ್ತಿ ಮತ್ತಿತರರು ಈ ವೇಳೆ ಹಾಜರಿದ್ದರು.

# 5,8,9 ಹಾಗೂ 11 ನೇ ತರಗತಿಗಳ ಪಬ್ಲಿಕ್ ಪರೀಕ್ಷೆ ರದ್ದು

**(1ನೇ ಪುಟದಿಂದ)** ಸುತ್ತೋಲೆಗಳನ್ನು ಪ್ರಶ್ನಿಸಿ ಕರ್ನಾಟಕ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘ ಕೋರ್ಟ್ ಮೆಟ್ಟಿಲೇರಿತ್ತು. ವಾದ-ಪ್ರತಿವಾದ ಆಲಿಸಿದ ಹೈಕೋರ್ಟ್ ಸರ್ಕಾರದ ಸುತ್ತೋಲೆ ರದ್ದುಗೊಳಿಸಿ ಆದೇಶಿಸಿದೆ.

ಪರೀಕ್ಷೆಸುತ್ತೋಲೆಯನ್ನುಹೈಕೋರ್ಟ್‌ರದ್ದುಗೊಳಿಸಿರುವುದರಿಂದ ಸರ್ಕಾರದ ನಿರ್ಧಾರಕ್ಕೆ ಹಿನ್ನಡೆಯಾಗಿದೆ. ತಕ್ಷಣಕ್ಕೆ ಮೇಲ್ಮನವಿ ಸಲ್ಲಿಸಿ ಪರೀಕ್ಷೆ ನಡೆಸುವ ಸಾಧ್ಯತೆ ಕಡಿಮೆ. ಈ ವರ್ಷದ ಮಟ್ಟಿಗೆ 5, 8, 9 ಮತ್ತು 11ನೇ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ಇರುವುದಿಲ್ಲ. ಅಲ್ಲದೆ, 9ನೇ ತರಗತಿವರೆಗೆ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುವ ಪದ್ಧತಿಯೂ ಇಲ್ಲ. ಈಗ ರಾಜ್ಯದಲ್ಲಿ 10ನೇ ತರಗತಿ ಮತ್ತು ದ್ವಿತೀಯ ಪಿಯುಸಿಗೆ ಮಾತ್ರ ಪಬ್ಲಿಕ್ ಪರೀಕ್ಷೆ ನಡೆಸಲಾಗುತ್ತಿದೆ.

# ನಗರದ ಎಂ.ಎಂ. ಶಿಕ್ಷಣ ವಿದ್ಯಾಲಯದಲ್ಲಿ ಇಂದು ವಿದ್ಯಾರ್ಥಿ ಸಂಘದ ಉದ್ಘಾಟನೆ

ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆ, ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ.

ವಿಶ್ರಾಂತ ಪ್ರಾಂಶುಪಾಲರಾದ ಪ್ರೊ.ವೈ.ಎಂ. ವಿಠಲರಾವ್ ಅಧ್ಯಕ್ಷತೆ ವಹಿಸುವರು. ಶ್ರೀ ತರಳಬಾಳು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಡಾ. ಹೆಚ್.ವಿ. ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸು ವರು. ಮುಖ್ಯ ಅತಿಥಿಗಳಾಗಿ ಡಯಟ್ ಪ್ರಾಚಾರ್ಯರಾದ ಎಸ್. ಗೀತಾ, ಕಾಲೇಜಿನ ಪ್ರಾಚಾರ್ಯ ಡಾ ಕೆ.ಟಿ. ನಾಗರಾಜನಾಯ್ಕ ಭಾಗವಹಿಸಲಿದ್ದಾರೆ. ಇದೇ ವೇಳೆ ಪಿಹೆಚ್‌ಡಿ ಪದವಿ ಪಡೆದ ಕಾಲೇಜಿನ ಉಪನ್ಯಾಸಕಿ ಡಾ.ಜಿ.ಹೆಚ್. ಆಶಾ ಅವರನ್ನು ಸನ್ಮಾನಿಸಲಾಗುವುದು.

# ವಿದ್ಯಾರ್ಥಿಗಳೇ ಉತ್ತರ ಪತ್ರಿಕೆ ತರುವ ಆದೇಶಕ್ಕೆ ಎಐಡಿಎಸ್‌ಓ ಖಂಡನೆ

ದಾವಣಗೆರೆ, ಮಾ. 6- 5, 8 ಹಾಗೂ 9 ನೇ ತರಗತಿಗಳ ಬೋರ್ಡ್ ಪರೀಕ್ಷೆಗೆ ವಿದ್ಯಾರ್ಥಿಗಳೇ ಉತ್ತರ ಪತ್ರಿಕೆ ತರಬೇಕು ಎಂಬ ಸರ್ಕಾರದ ಆದೇಶವನ್ನು ಎಐಡಿಎಸ್‌ಓ ತೀವ್ರವಾಗಿ ಖಂಡಿಸುತ್ತದೆ. ಸಂಘಟನೆಯ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

5, 8 ಹಾಗೂ 9ನೇ ತರಗತಿಯ ಬೋರ್ಡ್ ಪರೀಕ್ಷೆಗೆ ವಿದ್ಯಾರ್ಥಿಗಳೇ ಉತ್ತರ ಪತ್ರಿಕೆ ತರುವಂತೆ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ವಿದ್ಯಾರ್ಥಿ ವಿರೋಧಿಯಾಗಿದೆ. ಉತ್ತರ ಪತ್ರಿಕೆಗಳನ್ನು ವಿದ್ಯಾರ್ಥಿಗಳ ಮೂಲಕವೇ ತರಿಸುವಂತಹ ಆದೇಶಗಳು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಉದಾತ್ತ ಆಶಯಕ್ಕೆ ಧಕ್ಕೆಯನ್ನುಂಟು ಮಾಡುತ್ತದೆ. ಬಡ ಮಕ್ಕಳ ಮೇಲೆ ಈ ತರಹ ಯಾವುದೇ ರೀತಿಯ ಹೊರೆಯನ್ನು ಹೇರದೇ, ಈ ಕೂಡಲೇ ಈ ಆದೇಶವನ್ನು ಹಿಂಪಡೆಯ ಬೇಕೆಂದು ಕಾಮತ್ ಒತ್ತಾಯಿಸಿದ್ದಾರೆ.

# ಕ್ಯಾನ್ಸರ್ ತಪಾಸಣೆ ಶೇ.1ಕ್ಕಿಂತ ಕಡಿಮೆ

**(1ನೇ ಪುಟದಿಂದ)** ಮಕ್ಕಳು, ಮಹಿಳೆಯರು, ಹದಿ ಹರೆಯದವರಿಂದ ಹಿಡಿದು ಎಲ್ಲರ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಗಾಗಿ ನೆರವು ನೀಡಲಾಗುತ್ತಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಬಾಪೂಜಿ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ಕಾಯಿಲೆಗಳು ಹಾಗೂ ತಪಾಸಣೆ ಕುರಿತು ಮಹಿಳೆಯರು ಅರಿವು ಬೆಳೆಸಿಕೊಳ್ಳಬೇಕು. ಇತರರೂ ತಪಾಸಣೆಗೆ ಒಳಗಾಗಲು ಪ್ರೋತ್ಸಾಹಿಸಬೇಕು. ಇದರಿಂದ ಆರಂಭದಲ್ಲೇ ರೋಗ ಪತ್ತೆಯಾಗಿ, ಸಮಸ್ಯೆ ದೊಡ್ಡ ಮಟ್ಟಕ್ಕೆ ಬೆಳೆಯುವುದು ತಪ್ಪುತ್ತದೆ ಎಂದರು.

ವೇದಿಕೆಯ ಮೇಲೆ ಕ್ಯಾನ್ಸರ್ ರೋಗ ಗೆದ್ದಿರುವ ವೈದ್ಯೆ ಡಾ. ಗಿರಿಜಾ ನಾಡಗೌಡರ್ ಉಪಸ್ಥಿತರಿದ್ದರು.

ಅಖಿಲ್ ಹಾಗೂ ಉದಯ್ ಪ್ರಾರ್ಥಿಸಿದರು. ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದ ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ಮೂಗನಗೌಡ ಪಾಟೀಲ್ ಸ್ವಾಗತಿಸಿದರು.

# ಸಾಮೂಹಿಕ ಧರ್ಮೋಪನಯನ

ದಾವಣಗೆರೆ, ಮಾ. 6 - ಶ್ರೀ ಶಂಕರ ಸೇವಾ ಸಂಘದ ವತಿಯಿಂದ ಪ್ರತಿ ವರ್ಷ ಶ್ರೀ ಶಂಕರ ಜಯಂತಿಯಂದು ನಡೆಯುತ್ತಿದ್ದ ಸಾಮೂಹಿಕ ಧರ್ಮೋಪನಯನವನ್ನು ಗುರು ಅಸ್ತ್ರ ಇರುವ ಕಾರಣ, ಬರುವ ಏಪ್ರಿಲ್ 15ರ ಸೋಮವಾರ ನಡೆಸಲು ತೀರ್ಮಾನಿಸಲಾಗಿದೆ. ಆಸಕ್ತ ತ್ರಿಮತಸ್ಥ ವಿಪ್ರ ಬಾಂಧವರು ಏಪ್ರಿಲ್ 10ರೊಳಗೆ ದೇವಸ್ಥಾನದ ಮ್ಯಾನೇಜರ್ ಅಥವಾ ಕಾರ್ಯದರ್ಶಿ ಮೊ: 08192-221680, 82964 08068 ಮತ್ತು 94480 43569 ಸಂಪರ್ಕಿಸಿ ಹೆಸರು ನೋಂದಣಿ ಮಾಡಿಕೊಳ್ಳುವಂತೆ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಷಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು 'ಸಂಸಾಧನಾ' ವಾರ್ಷಿಕೋತ್ಸವ

'ನಮ್ಮ ನಡೆ ಆರೋಗ್ಯದ ಕಡೆ' ಎಸ್.ಎಸ್ ಕೇರ್ ಟ್ರಸ್ಟ್ ವತಿಯಿಂದ 'ಸಂಸಾಧನ' 5 ನೇ ವಾರ್ಷಿಕೋತ್ಸವ ಕಾರ್ಯಕ್ರಮ ಇಂದು ಸಂಜೆ 5 ಗಂಟೆಗೆ ನಗರದ ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿದೆ.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶಿವರಾಜ್ ವಿ. ಪಾಟೀಲ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಟ್ರಸ್ಟ್ ಸಂಸ್ಥಾಪಕರಾದ ಶಾಮನೂರು ಶಿವಶಂಕರಪ್ಪ, ವ್ಯವಸ್ಥಾಪಕ ಟ್ರಸ್ಟಿ ಎಸ್.ಎಸ್. ಮಲ್ಲಿಕಾರ್ಜುನ್ ಭಾಗವಹಿಸುವರು. ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ.

# ಉಕ್ಕಡಗಾತ್ರಿ ಅಜ್ಜಯ್ಯನಿಗೆ ನಂದಿಗುಡಿ ಶ್ರೀಗಳಿಂದ ನಾಳೆ ಚಿನ್ನದ ಕಿರೀಟ ಧಾರಣೆ



ಮಲೇಬೆನ್ನೂರು, ಮಾ.6- ಸುಕ್ಷೇತ್ರ ಉಕ್ಕಡಗಾತ್ರಿಯ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನಿಗೆ ಭಕ್ತರ ನೆರವಿನಿಂದ ಮಾಡಿಸಿರುವ 2.5 ಕೆ.ಜಿ. ತೂಕದ ಚಿನ್ನದ ಕಿರೀಟವನ್ನು ನಾಡಿದ್ದು ದಿನಾಂಕ 8 ರ ಶುಕ್ರವಾರ ಧಾರಣೆ ಮಾಡಲಾಗುವುದು ಎಂದು ಗದ್ದುಗೆ ಟ್ರಸ್ಟ್ ಕಾರ್ಯದರ್ಶಿ ಎಸ್.ಸುರೇಶ್ ತಿಳಿಸಿದ್ದಾರೆ.

ಸ್ವರ್ಣ ಕಿರೀಟವನ್ನು ಶಿವರಾತ್ರಿ ದಿನವಾದ ನಾಡಿದ್ದು ದಿನಾಂಕ 8 ರ ಶುಕ್ರವಾರ ಬೆಳಗ್ಗೆ ಕರ್ತೃ ಗದ್ದುಗೆಗೆ ಅಭಿಷೇಕ, ಮಹಾಮಂಗಳಾರತಿ ನೆರವೇರಿಸಿದ ನಂತರ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಭಕ್ತರ ಸಮ್ಮುಖದಲ್ಲಿ ತಮ್ಮ ಅಮೃತ ಹಸ್ತದಿಂದ ಅಜ್ಜಯ್ಯನಿಗೆ ಧಾರಣೆ ಮಾಡಲಿದ್ದಾರೆ.

ಅಜ್ಜಯ್ಯನಿಗೆ ಚಿನ್ನದ ಕಿರೀಟ ಮಾಡಿಸಬೇಕೆಂದು ಟ್ರಸ್ಟ್ ನಿರ್ದೇಶಕರ ಮತ್ತು ಭಕ್ತಾದಿಗಳ ಮಹದಾಸೆಯಾಗಿತ್ತು. ಅವರೆಲ್ಲರ ಸಂಕಲ್ಪದಂತೆ ಅಜ್ಜಯ್ಯನಿಗೆ ಭಕ್ತರ ದೇಣಿಗೆಯಿಂದ 1.65 ಕೋಟಿ ರೂ. ವೆಚ್ಚದಲ್ಲಿ ಏಳು ಹೆಡೆಯ ನಾಗರವನ್ನುಳ್ಳ 2.5 ಕೆ.ಜಿ. ತೂಕದ ಚಿನ್ನದ ಕಿರೀಟ ತಯಾರಿಸಲಾಗಿದೆ.

ಅಜ್ಜಯ್ಯನಿಗೆ ಈಗಾಗಲೇ ಬೆಳ್ಳಿಯ ಕಿರೀಟ ಮತ್ತು ವಸ್ತ್ರದ ಕಿರೀಟಗಳಿವೆ. ಆದರೆ ಚಿನ್ನದ ಕಿರೀಟವೊಂದು ಇರಲಿ ಎಂದು ಕಳೆದ ವರ್ಷವೇ ಸಂಕಲ್ಪ ಮಾಡಿಕೊಂಡಿದ್ದೆವು. ಅದರಂತೆ ಬೆಂಗಳೂರಿನ ಗಂಗಾಧರ ಆಚಾರ್ ಸಿಲ್ವರ್ ವರ್ಕ್ಸ್‌ನವರು ಕೇವಲ 2 ತಿಂಗಳಲ್ಲಿ ಈ ಚಿನ್ನದ ಕಿರೀಟವನ್ನು ತಯಾರಿಸಿ ಕೊಟ್ಟಿದ್ದಾರೆ ಎಂದು ಸುರೇಶ್ ತಿಳಿಸಿದರು.

**ಎಸ್ಸೆಸ್ ಭಾಗಿ :** ಅಜ್ಜಯ್ಯನಿಗೆ ಚಿನ್ನದ ಕಿರೀಟ ಧಾರಣೆ ಕಾರ್ಯಕ್ರಮದಲ್ಲಿ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಬಿ.ಪಿ.ಹರೀಶ್, ಉದ್ಯಮಿ ಎಸ್.ಎಸ್.ಗಣೇಶ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಸೇರಿದಂತೆ ಇನ್ನೂ ಅನೇಕ ಗಣ್ಯರು ಭಾಗವಹಿಸಲಿದ್ದಾರೆಂದು ಗದ್ದುಗೆ ಟ್ರಸ್ಟ್ ಕಮಿಟಿ ನಿರ್ದೇಶಕ ಜಿಗಳಿ ಇಂದೂಧರ್ ತಿಳಿಸಿದ್ದಾರೆ.

**ಜಾತ್ರೆ :** ಇದೇ ದಿನಾಂಕ 10 ರಿಂದ 17 ರವರೆಗೆ ಉಕ್ಕಡಗಾತ್ರಿಯಲ್ಲಿ ಅಜ್ಜಯ್ಯನ ಮಹಾ ಶಿವರಾತ್ರಿ ಜಾತ್ರೆ ಜರುಗಲಿದ್ದು, 11 ರಂದು ಅಜ್ಜಯ್ಯನ ಮಹಾರಥೋತ್ಸವ ನಡೆಯಲಿದೆ. ಅದಕ್ಕಾಗಿ ಎಲ್ಲಾ ಸಿದ್ದತೆಗಳು ಭರದಿಂದ ಸಾಗಿವೆ ಎಂದು ಸುರೇಶ್ ಮಾಹಿತಿ ನೀಡಿದರು.

# ಹರಪನಹಳ್ಳಿ : ಜೆಸಿಐ ತಾಲ್ಲೂಕು ಅಧ್ಯಕ್ಷರಾಗಿ ಡಾ. ಪ್ರಿಯಾಂಕ ಅಧಿಕಾರ್



ಹರಪನಹಳ್ಳಿ, ಮಾ. 6 - ಜೆಸಿಐ ತಾಲ್ಲೂಕು ಅಧ್ಯಕ್ಷರಾಗಿ ಡಾ. ಪ್ರಿಯಾಂಕ ಅಧಿಕಾರ್ ಅವರು ಅಧಿಕಾರ ಸ್ವೀಕರಿಸಿದರು.

ತಾಲ್ಲೂಕಿನ ಕಾಯಕದ ಹಳ್ಳಿ ಗ್ರಾಮದ ಸಮೀಪದಲ್ಲಿರುವ ಪರಿವರ್ತನಾ ಶಾಲೆಯಲ್ಲಿ ಆಯೋಜಿಸಿದ್ದ ಅಧಿಕಾರ ಹಸ್ತಾಂತರ ಕಾರ್ಯಕ್ರಮದಲ್ಲಿ ಡಾ.ಪ್ರಿಯಾಂಕ ಅಧಿಕಾರ್ ಅವರು ತಮ್ಮ ಅಧಿಕಾರವನ್ನು ಸ್ವೀಕರಿಸಿದರು.

ಈ ವೇಳೆ ಪರಶುರಾಮ ಚಲವಾದಿ, ವಕೀಲ ಮತ್ತಿಹಳ್ಳಿ ಅಜ್ಜಣ್ಣ, ರವಿಶಂಕರ್, ಪ್ರಭಾಕರ್ ಕನ್ನಿಹಳ್ಳಿ, ಹೇಮಣ್ಣ ಮೋರಗೇರಿ, ಅಂಬಣ್ಣ, ಶಿವಕುಮಾರ್, ರವೀಂದ್ರ ಅಧಿಕಾರ್, ಪ್ರಸನ್ನಕುಮಾರ್ ಜೈನ್, ಮಲ್ಲಿಕಾರ್ಜುನ, ಟಿ. ಎಂ. ವೀರೇಶ್, ಇರ್ಷಾದ್ ಭಾಷಾ, ಶಿವಕುಮಾರ್ ನಾಯ್ಕ್, ಡಾ. ಎಂ.ಬಿ. ಅಧಿಕಾರ್, ಡಾ. ಹರ್ಷ ಜಿ.ವಿ, ಡಾ. ಪ್ರಶಾಂತ್ ಬಂದಣ್ಣನವರ್, ಡಾ. ಸೀಮಾ ಅಧಿಕಾರ್, ಡಾ. ರಘು ಅಧಿಕಾರ್ ಸೇರಿದಂತೆ ಪರಿವರ್ತನಾ ಶಾಲೆಯ ಶಿಕ್ಷಕರು ಸೇರಿದಂತೆ ಜೆಸಿಐ ಸದಸ್ಯರು ಉಪಸ್ಥಿತರಿದ್ದರು.

# ಭಾರತದ ಕಾರ್ಮಿಕರ ಬಗ್ಗೆ ಜನಾಂಗೀಯ ಹೇಳಿಕೆ : ತೈವಾನ್ ಸಚಿವೆ ಕ್ಷಮೆ ಯಾಚನೆ

ತೈಪೈ, ಮಾ. 6 - ಭಾರತದ ನಿರ್ದಿಷ್ಟ ಪ್ರಾಂತ್ಯದಿಂದ ವಲಸೆ ಕಾರ್ಮಿಕರನ್ನು ಕರೆಸುವ ತೈವಾನ್ ಸರ್ಕಾರದ ಯೋಜನೆಯ ಕುರಿತು ನೀಡಿದ ಹೇಳಿಕೆಗಾಗಿ ಕಾರ್ಮಿಕ ಸಚಿವೆ ಸು ಮಿಂಗ್ - ಚುನ್ ಕ್ಷಮೆ ಯಾಚಿಸಿದ್ದಾರೆ.

ಭಾರತ ಹಾಗೂ ತೈವಾನ್‌ಗಳು ಫೆಬ್ರವರಿ 16ರಂದು ಒಪ್ಪಂದವೊಂದಕ್ಕೆ ಸಹಿ ಹಾಕಿ, ಜನರ ನಡುವಿನ ಸಂಪರ್ಕ ಹೆಚ್ಚಿಸಲು ನಿರ್ಧರಿಸಿದ್ದವು. ಇದರ ಅನ್ವಯ ಭಾರತದ ಕಾರ್ಮಿಕರನ್ನು ತೈವಾನ್ ನೇಮಿಸಿಕೊಳ್ಳಲಿದೆ.

ಕಾರ್ಮಿಕರನ್ನು ನೇಮಿಸಿಕೊಳ್ಳುವ ಕುರಿತು ಇತ್ತೀಚೆಗೆ ಮಾತನಾಡಿದ್ದ ಸು ಮಿಂಗ್ - ಚುನ್, ಈಶಾನ್ಯ ರಾಜ್ಯಗಳಲ್ಲಿನ ಜನರ ಚರ್ಮದ ಬಣ್ಣ ಹಾಗೂ ಆಹಾರ ಪದ್ಧತಿಗಳು ನಮಗೆ ನಿಕಟವರ್ತಿಯಾಗಿವೆ. ಹೀಗಾಗಿ ಅವರನ್ನು ಮೊದಲು ನೇಮಿಸಿಕೊಳ್ಳಲಾಗುವುದು ಎಂದಿದ್ದರು.

ಈ ಭಾಗದವರಲ್ಲಿ ಬಹುತೇಕರು ಕ್ರಿಶ್ಚಿಯನ್ನರಾಗಿದ್ದಾರೆ. ಅವರು ಕಟ್ಟಡ ನಿರ್ಮಾಣ ಹಾಗೂ ಕೃಷಿಯಲ್ಲಿ ಪರಿಣಿತರಾಗಿದ್ದಾರೆ ಎಂದೂ ಸಚಿವೆ ಹೇಳಿದ್ದರು.

ಅವರ ಹೇಳಿಕೆಯನ್ನು ಆಡಳಿತಾರೂಢ ಡೆಮಾಕ್ರಟಿಕ್ ಪ್ರೊಗ್ರೆಸಿವ್ ಪಾರ್ಟಿ ಶಾಸಕ ಚೆನ್ ಕುವಾನ್ - ಟಿಂಗ್ ಟೀಕಿಸಿದ್ದರು. ಚರ್ಮದ ಬಣ್ಣ ಹಾಗೂ ಜನಾಂಗಗಳು ವಲಸೆ ಕಾರ್ಮಿಕರ ನೇಮಕಕ್ಕೆ ಆಧಾರವಾಗಬಾರದು ಎಂದೂ ಅವರು ಹೇಳಿದ್ದರು.


॥ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿ ಪ್ರಸನ್ನ ॥

**ಗುರು ಲಿಂಗ ಜಂಗಮಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ನಗರ ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್ ವಾಸಿ
**ಕಾರಿಗನೂರು ಮಠದ ಶ್ರೀಮತಿ ಎಂ.ಎಸ್. ಶಿವರುದ್ರಮ್ಮ** (ನಿವೃತ್ತ ಮುಖ್ಯ ಶಿಕ್ಷಕಿ)
**ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.**



ದಿನಾಂಕ : 03.03.2024ನೇ
ಭಾನುವಾರ ಬೆಳಿಗ್ಗೆ 11 ಗಂಟೆಗೆ
ನನ್ನ ಮಗನಾದ
**ಶ್ರೀ ಎಸ್.ಮಲ್ಲಿಕಾರ್ಜುನ ಸ್ವಾಮಿ**
ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
**ಗುರು ಲಿಂಗ ಜಂಗಮಾರಾಧನೆಯನ್ನು**

**ದಿನಾಂಕ : 07.03.2024ನೇ ಗುರುವಾರ ಬೆಳಿಗ್ಗೆ 11.00 ಗಂಟೆಗೆ**
**ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್ ದಾವಣಗೆರೆಯ**
**ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ.**
ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬ ವರ್ಗ : ಶ್ರೀಮತಿ ಎಂ.ಎಸ್. ಶಿವರುದ್ರಮ್ಮ (ನಿವೃತ್ತ ಮುಖ್ಯ ಶಿಕ್ಷಕಿ) ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಲಿಂಗೈಕ್ಯರ ಧರ್ಮಪತ್ನಿ : ಎಂ.ಎಸ್. ನಾಗರತ್ನಮ್ಮ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು. ಮೊ : 94484 43164, 78920 34156**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


**ನೇತ್ರದಾನ ಶ್ರೇಷ್ಠದಾನ**

## ಬಿ.ಸಿ. ದೇವೇಂದ್ರಪ್ಪ ಆಲೂರು ನಿಧನ



ದಿ॥ ಚನ್ನಪ್ಪ ಬಾಳಪ್ಪರ ಇವರ ಮಗನಾದ ಬಿ.ಸಿ. ದೇವೇಂದ್ರಪ್ಪ ಆಲೂರು ಇವರು ದಿನಾಂಕ : 6.3.2024 ರಂದು ಬುಧವಾರ ಬೆಳಿಗ್ಗೆ 10.36 ಕ್ಕೆ ನಿಧನರಾಗಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 7.3.2024 ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಆಲೂರು ಗ್ರಾಮದಲ್ಲಿ ನೆರವೇರಿಸಲಾಗುವುದು. ಮೃತರು ಪತ್ನಿ, ಇಬ್ಬರು ಪುತ್ರ ಮತ್ತು ಓರ್ವ ಪುತ್ರಿ ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

# ಕ್ರಿಪ್ಟೋ ವಂಚನೆ : ಹತ್ತು ಜನರ ವಿರುದ್ಧ ಆರೋಪ ಪಟ್ಟಿ

ನವದೆಹಲಿ, ಮಾ. 6 – ಕ್ರಿಪ್ಟೋ ಕರೆನ್ಸಿ ಹೆಸರಿನಲ್ಲಿ ವಂಚನೆ ಮಾಡಿದ ಆರೋಪದ ಮೇಲೆ ಚೀನಾ ಮೂಲದ ಹತ್ತು ಜನರೂ ಸೇರಿದಂತೆ 299 ಜನರ ವಿರುದ್ಧ ಅಕ್ರಮ ಹಣದ ಆರೋಪ ಪಟ್ಟಿ ದಾಖಲಿಸಲಾಗಿದೆ.

ನಾಗಾಲ್ಯಾಂಡ್‌ನ ದಿಮಾಪುರ ವಿಶೇಷ ನ್ಯಾಯಾಲಯದಲ್ಲಿ ಜಾರಿ ನಿರ್ದೇಶನಾಲಯವು ಆರೋಪ ಪಟ್ಟಿ ದಾಖಲಿಸಿದೆ.

ಹೆಚ್‌ಪಿಝಡ್ ಟೋಕನ್ ಎಂಬ ಮೊಬೈಲ್ ಆಪ್ ಬಳಸಿ ಹೂಡಿಕೆದಾರರಿಗೆ ವಂಚಿಸಲಾಗಿತ್ತು. ನಕಲಿ ಕಂಪನಿಗಳ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ಹಣ ಪಡೆಯಲಾಗಿತ್ತು ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.

# ಹರಿಹರದಲ್ಲಿ ಹಜರತ್ ಸೈಯದ್ ನಾಡಬಂದ್ ಷಾವಲಿ ಖಾದರಿ ಸಂದಲ್ ಓ ಉರುಸ್ ಮೆರವಣಿಗೆ



ಹರಿಹರ, ಮಾ. 6- ನಗರದ ತುಂಗಭದ್ರಾ ನದಿಯ ಹತ್ತಿರದ ದರ್ಗಾ ಸಮಿತಿ ವತಿಯಿಂದ ಹಜರತ್ ಸೈಯದ್ ನಾಡಬಂದ್ ಷಾವಲಿ ಖಾದರಿ ಸಂದಲ್ ಓ ಉರುಸ್ ಮೆರವಣಿಗೆ ಕಾರ್ಯಕ್ರಮ ಇಂದು ಅದ್ದೂರಿಯಾಗಿ ಜರುಗಿತು.

ದರ್ಗಾದಿಂದ ಆರಂಭಗೊಂಡ ಮೆರವಣಿಗೆಯಲ್ಲಿ ಬ್ಯಾಂಡ್ ಸೆಟ್, ಕುದುರೆ ಕುಣಿತ ಸೇರಿದಂತೆ ವಿವಿಧ ಕಲಾ ತಂಡದವರು ಭಾಗವಹಿಸಿದ್ದರು. ಆಸಿಫ್ ಉಲ್ಲಾ, ಖಾನ್ ಸದರ್, ಪೇಂಟರ್ ಗೌಸ್ ಸಾಬ್, ಹಜರತ್ ಪ್ಯಾರಿಜಾನ್ ಸಾಬ್, ಖಲಿಫಾಯೇ ಸತ್ತಾರ್ ಸಾಬ್, ಮಕಾನ್ ದಾರ್ ಮಶಾಹಿಕ್ ಫಕೀರರ ಸಮ್ಮುಖದಲ್ಲಿ ಗಲೇಫ್ ಮತ್ತು ಸಂದಲ್ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುನಃ ದರ್ಗಾಕ್ಕೆ ಆಗಮಿಸಿತು.

ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಬಿ.ಕೆ. ಸೈಯದ್ ರೆಹಮಾನ್, ಸೈಯದ್ ಜಬಿವುಲ್ಲಾ, ಬಿ.ಕೆ. ಸೈಯದ್ ಬಾಷಾ, ಅಲಿ ಆಹ್ಮದ್, ಹಾಜಿಹಾಲಿ ಖಾನ್, ಆಮ್ಮದ್ ಖಾನ್, ಮೊಹಮ್ಮದ್ ಇಬ್ರಾಹಿಂ ಸಾಬ್, ಶಬ್ಬೀರ್ ಆಹ್ಮದ್ ಖುರೇಶಿ, ಅಲ್ಲಾಬಕ್ಷ್, ಗೌಸ್ ಖಾನ್, ಅಬ್ದುಲ್ ಸತ್ತಾರ್ ಸಾಬ್, ಸೈಯದ್ ಮೆಹಬೂಬ್ ಸಾಬ್ ಮತ್ತು ಉರುಸ್ ಕಮಿಟಿಯ ಆಸೀಫ್ ಆಲಿ ಖಾನ್, ಮುಸ್ತಾಫ್, ಅಬ್ದುಲ್ ಘನಿ, ರೆಹಮಾನ್ ಪೇಂಟರ್, ಇರ್ಫಾನ್ ದರ್ವೇಶ್ ಇತರರು ಹಾಜರಿದ್ದರು.

ಉರುಸ್ ಅಂಗವಾಗಿ ನಾಳೆ ದಿನಾಂಕ 7ರ ಗುರುವಾರ ರಾತ್ರಿ 10 ಗಂಟೆಗೆ ಮುಂಬೈನ ಆಸೀಫ್ ನಾಜಾ ಮತ್ತು ಪಾರ್ಟಿ, ಉತ್ತರ ಪ್ರದೇಶದ ಬಿಜನೂರ್ ಸರ್ಫ್ರಾಜ್, ಸಾಬಿರಿ ಕ್ವ್ಯಾವಲ್ ಸೇರಿದಂತೆ ಇತರೆ ಪ್ರಸಿದ್ಧ ಖವ್ವಾಲರುಗಳಿಂದ ಜಿದ್ದಾ-ಜಿದ್ದಿ ಖವ್ವಾಲಿ ಕಾರ್ಯಕ್ರಮ ನಡೆಯಲಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಬೆಂಗಳೂರು ಸ್ಫೋಟ : ಆರೋಪಿ ಪತ್ತೆಗೆ 10 ಲಕ್ಷ ರೂ. ಬಹುಮಾನ**

ನವದೆಹಲಿ : ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಆರೋಪಿಯ ಚಿತ್ರವನ್ನು ಬಿಡುಗಡೆ ಮಾಡಿದೆ. ಈತನ ಬಗ್ಗೆ ಮಾಹಿತಿ ನೀಡಿದವರಿಗೆ 10 ಲಕ್ಷ ರೂ. ಬಹುಮಾನ ನೀಡುವುದಾಗಿ ತಿಳಿಸಿದೆ.

**ಸಂದೇಶ್‌ಖಾಲಿಯಿಂದ ತೃಣಮೂಲ ಕುಸಿಯಲಿದೆ : ಪ್ರಧಾನಿ**

ನವದೆಹಲಿ : ಸಂದೇಶ್‌ಖಾಲಿ ಕಾರಣದಿಂದಾಗಿ ತೃಣಮೂಲ ಕಾಂಗ್ರೆಸ್ ಕುಸಿಯಲಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಸಂದೇಶ್‌ಖಾಲಿ ಸಂತ್ರಸ್ತರ ಜೊತೆ ಮಾತನಾಡಿದ ಅವರು ಈ ವಿಷಯ ಪಶ್ಚಿಮ ಬಂಗಾಳದಾದ್ಯಂತ ಪ್ರತಿಧ್ವನಿಸಲಿದೆ. ನಾರಿ ಶಕ್ತಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಹೇಳಿದರು.

**ಸಮನ್ಸ್‌ಗೆ ಕೇಜ್ರಿವಾಲ್ ಗೈರು, ಮತ್ತೊಂದು ದೂರು**

ನವದೆಹಲಿ : ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮತ್ತೊಂದು ದೂರು ದಾಖಲಿಸಿದೆ. ಈ ಹಿಂದೆ ಕಳಿಸಲಾದ ಸಮನ್ಸ್‌ಗಳಿಗೆ ಕೇಜ್ರಿವಾಲ್ ಹಾಜರಾಗಿಲ್ಲ ಎಂದು ಜಾರಿ ನಿರ್ದೇಶನಾಲಯ ದೂರಿನಲ್ಲಿ ತಿಳಿಸಿದೆ. ಕೇಜ್ರಿವಾಲ್ ಗೈರಿನ ಬಗ್ಗೆ ಜಾರಿ ನಿರ್ದೇಶನಾಲಯ ಈ ಹಿಂದೆಯೂ ದೂರು ದಾಖಲಿಸಿತ್ತು.

**ಅಭಯಾರಣ್ಯದಲ್ಲಿ ಅಕ್ರಮ ನಿರ್ಮಾಣಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪ**

ನವದೆಹಲಿ : ಕಾರ್ಬೆಟ್ ಹುಲಿ ಅಭಯಾರಣ್ಯದಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ನಿರ್ಮಾಣಗಳಿಗೆ ಅವಕಾಶ ನೀಡಲಾಗಿದೆ ಮತ್ತು ಮರಗಳನ್ನು ಉರುಳಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರಾಖಂಡದ ಮಾಜಿ ಸಚಿವ ಹಾರಕ್ ಸಿಂಗ್ ರಾವತ್ ಹಾಗೂ ಮಾಜಿ ವಿಭಾಗrಯ ಅರಣ್ಯಾಧಿಕಾರಿಯನ್ನು ತರಾಟೆಗೆ ತೆಗೆದುಕೊಂಡಿದೆ.

**ರಷ್ಯಾದಲ್ಲಿ ಭಾರತೀಯನ ಸಾವು**

ನವದೆಹಲಿ : ರಷ್ಯಾದಲ್ಲಿ ಭಾರತೀಯನೋರ್ವ ಸಾವನ್ನಪ್ಪಿದ್ದಾನೆ. ಮೃತ ವ್ಯಕ್ತಿಯನ್ನು ಮೊಹಮ್ಮದ್ ಅಸ್ಫಾನ್ ಎಂದು ಗುರುತಿಸಲಾಗಿದೆ. ಮೃತ ದೇಹವನ್ನು ಭಾರತಕ್ಕೆ ತರಲು ರಾಯಭಾರಿ ಕಚೇರಿಯು ಕ್ರಮ ತೆಗೆದುಕೊಳ್ಳುತ್ತಿದೆ. ರಷ್ಯಾದ ಸಮರ ಭೂಮಿಯಲ್ಲಿ ಸುಮಾರು 20 ಭಾರತೀಯರು ಸಿಲುಕಿದ್ದಾರೆ ಎನ್ನಲಾಗಿದೆ. ಇವರು ಉಕ್ರೇನ್ ವಿರುದ್ಧದ ಸಮರದಲ್ಲಿ ರಷ್ಯಾ ಸೈನ್ಯದ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಅಧ್ಯಕ್ಷ ಸ್ಥಾನದ ಸ್ಪರ್ಧೆಯಿಂದ ಹೊರ ಬಿದ್ದ ನಿಕ್ಕಿ ಹ್ಯಾಲೆ**

ವಾಷಿಂಗ್ಟನ್ : ಭಾರತೀಯ ಮೂಲದ ಅಮೆರಿಕದ ನಿಕ್ಕಿ ಹ್ಯಾಲೆ ಅವರು ಅಧ್ಯಕ್ಷ ಸ್ಥಾನದ ಸ್ಪರ್ಧೆಯಿಂದ ಹಿಂದೆ ಸರಿದಿರುವುದಾಗಿ ತಿಳಿಸಿದ್ದಾರೆ. ಅಮೆರಿಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಲು 15 ರಾಜ್ಯಗಳಲ್ಲಿ ನಡೆದ ಮತದಾನದಲ್ಲಿ ಅವರು ಸೋಲು ಕಂಡಿದ್ದರು. ನಂತರ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಈ ಹಿನ್ನೆಲೆಯಲ್ಲಿ ಹಾಲಿ ಅಧ್ಯಕ್ಷ ಜೋ ಬಿಡೆನ್ ಹಾಗೂ ಡೊನಾಲ್ಡ್ ಟ್ರಂಪ್ ನಡುವೆ ಸ್ಪರ್ಧೆ ನಡೆಯುವುದು ಬಹುತೇಕ ಖಚಿತವಾಗಿದೆ.

## ಕೆ.ಬೇವಿನಹಳ್ಳಿಯಲ್ಲಿ ಶಾಲಾ ಸುಧಾರಣಾ ಸಮಿತಿ ಮನವಿ



ಹರಿಹರ,ಮಾ.6- ತಾಲೂಕಿನ ಕೆ.ಬೇವಿನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶಾಲಾ ಸುಧಾರಣಾ ಸಮಿತಿಯ ವತಿಯಿಂದ ಕ್ಷೇತ್ರದ ಶಾಸಕ ಬಿ.ಪಿ. ಹರೀಶ್ ರವರಿಗೆ ಅನುದಾನ ಕೋರಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ, ಇಸಿಓ ಮಂಜುನಾಥ್, ಬಿಆರ್‌ಸಿ ತಿಪ್ಪೇಸ್ವಾಮಿ, ಬಿಆರ್‌ಪಿ ಶ್ರೀಮತಿ ಭಾಗ್ಯಲಕ್ಷ್ಮಿ, ಮುಖ್ಯೋಪಾ ಧ್ಯಾಯ ರಾದ ಇಂದ್ರಮ್ಮ, ಎನ್‌ಪಿಎಸ್ ನೌಕರರ ಸಂಘದ ಕಾರ್ಯದರ್ಶಿ ಸಂಗಣ್ಣನವರ್ ಹಾಗೂ ಎಸ್ ಡಿ ಎಂ ಸಿ ಅಧ್ಯಕ್ಷ ಮಹೇಶ್, ಮುಖಂಡರಾದ ನಾಗರಾಜ್ ಅಂಗಡಿ, ಭಾಗ್ಯಮ್ಮ ಸವಿತಾ, ಗುರುಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

## ನದಿ ತಳದ ಮೆಟ್ರೋ ಮಾರ್ಗ ಉದ್ಘಾಟನೆ

ಕೊಲ್ಕತಾ, ಮಾ. 6 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇಶದ ಮೊದಲ ನದಿ ತಳದ ಮೆಟ್ರೋ ಸುರಂಗವನ್ನು ಉದ್ಘಾಟಿಸಿದ್ದಾರೆ. ಹೂಗ್ಲಿ ನದಿಯ ತಳದಲ್ಲಿ ಕೊಲ್ಕತಾ ಮೆಟ್ರೋ ಮಾರ್ಗವನ್ನು ರೂಪಿಸಲಾಗಿದೆ.

ಉದ್ಘಾಟನೆ ನಂತರ ಪ್ರಧಾನಿ ಎಸ್‌ಪ್ಲಾನೇಡ್‌ನಿಂದ ಹೌರಾ ಮೈದಾನ್‌ಗೆ ಮೆಟ್ರೋದಲ್ಲಿ ತೆರಳಿದರು. ಈ ಸಂದರ್ಭದಲ್ಲಿ ಅವರು ತಮ್ಮೊಂದಿಗೆ ಪ್ರಯಾಣ ಮಾಡಿದ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು.

ಅವರೊಂದಿಗೆ ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಉಪಸ್ಥಿತರಿದ್ದರು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರಲಿಲ್ಲ.

4.8 ಕಿ.ಮೀ. ಉದ್ದದ ಎಸ್‌ಪ್ಲಾನೇಡ್ ಹಾಗೂ ಹೌರಾ ಮೈದಾನ್ ಮಾರ್ಗವನ್ನು 4,960 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಇದೇ ವೇಳೆ ಪ್ರಧಾನಿ ಮೋದಿ ಅವರು ತಾರಾತಲ – ಮಝೆರ್‌ಹತ್ ನಡುವಿನ 1.25 ಕಿ.ಮೀ. ಮಾರ್ಗವನ್ನೂ ಉದ್ಘಾಟಿಸಿದರು. 520 ಕೋಟಿ ರೂ. ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗಿದೆ.

1,430 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಕವಿ ಶುಭಾಷ್ - ಹೇಮಂತ ಮುಖೋಪಾಧ್ಯಾಯ್ 5.4 ಕಿ.ಮೀ. ಮೆಟ್ರೋ ಮಾರ್ಗವನ್ನೂ ಪ್ರಧಾನಿ ಉದ್ಘಾಟಿಸಿದ್ದಾರೆ.

## ಟಿಕೆಟ್ ಅಂತಿಮಗೊಳಿಸಲು ಇಂದು ಕಾಂಗ್ರೆಸ್ ಸಭೆ

ನವದೆಹಲಿ, ಮಾ. 6 – ನಾಳೆ ಗುರುವಾರ ಕಾಂಗ್ರೆಸ್ ಪಕ್ಷದ ಉನ್ನತ ನಾಯಕರು ಸಭೆ ನಡೆಸಲಿದ್ದು, ಲೋಕಸಭಾ ಚುನಾವಣೆಗಾಗಿ ಪಕ್ಷದ ಅಭ್ಯರ್ಥಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ವಾದ್ರಾ ಅವರು ಉತ್ತರ ಪ್ರದೇಶದಿಂದ ಸ್ಪರ್ಧಿಸುವ ಸಾಧ್ಯತೆ ಇದೆ.

ಕಾಂಗ್ರೆಸ್ ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಮೊದಲ ಸಭೆ ಗುರುವಾರ ಸಂಜೆ 6 ಗಂಟೆಗೆ ನಡೆಯಲಿದೆ. ಈ ಸಭೆಯಲ್ಲಿ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ನಾಯಕ ರಾಹುಲ್ ಗಾಂಧಿ ಉಪಸ್ಥಿತರಿರಲಿದ್ದಾರೆ.

## ಹೌತಿ ಉಗ್ರರ ದಾಳಿಯಲ್ಲಿ ಮೊದಲ ಸಾವು

ದುಬೈ, ಮಾ. 6 – ಶಂಕಿತ ಯೆಮನ್ ಹೌತಿ ಉಗ್ರರು ಏಡನ್ ಕೊಲ್ಲಿಯಲ್ಲಿ ವಾಣಿಜ್ಯ ಹಡಗೊಂದರ ಮೇಲೆ ದಾಳಿ ನಡೆಸಿದ್ದು, ಹಲವರು ಸಾವನ್ನಪ್ಪಿದ್ದಾರೆ. ಇಸ್ರೇಲ್ ಸಮರದ ನಂತರ ಉಗ್ರರು ಹಡಗುಗಳ ಮೇಲೆ ನಡೆಸಿದ ದಾಳಿಯಲ್ಲಿ ಇದೇ ಮೊದಲ ಬಾರಿ ಸಾವು ಸಂಭವಿಸಿದೆ.

ಪ್ರತ್ಯೇಕ ಘಟನೆಯಲ್ಲಿ ಹೌತಿ ಉಗ್ರರು ದಾಳಿ ನಡೆಸಲು ಬಳಸಿದ್ದ ಡ್ರೋನ್ ಹಾಗೂ ಕ್ಷಿಪಣಿಗಳನ್ನು ಅಮೆರಿಕದ ಸೈನಿಕರು ಹೊಡೆದುರುಳಿಸಿದ್ದಾರೆ.

ಬಾರ್ಡೋಸ್ ಧ್ವಜ ಹೊಂದಿರುವ ಟ್ರೂ ಕಾನ್ಫಿಡೆನ್ಸ್ ಎಂಬ ಹಡಗಿನ ಮೇಲೆ ಉಗ್ರರು ದಾಳಿ ನಡೆಸಿದ್ದಾರೆ. ನವೆಂಬರ್ ನಂತರದಲ್ಲಿ ಉಗ್ರರು ಕೆಂಪು ಸಮುದ್ರ ಹಾಗೂ ಸುತ್ತಲಿನ ಪ್ರದೇಶದ ಹಡಗುಗಳ ಮೇಲೆ ನಿರಂತರ ದಾಳಿ ನಡೆಸುತ್ತಿದ್ದಾರೆ.

# ಭೂಮಾಪನಾ ಮತ್ತು ಭೂದಾಖಲೆಗಳ ವಿಸ್ತೃತ ಜ್ಞಾನ ವಕೀಲರು ಮತ್ತು ನ್ಯಾಯಾಧೀಶರಿಗೂ ಅತ್ಯಗತ್ಯ



ದಾವಣಗೆರೆ, ಮಾ. 6 - ಜಿಲ್ಲಾ ವಕೀಲರ ಸಂಘದಿಂದ ನಗರದ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಉಪನ್ಯಾಸ ಮಾಲಿಕೆ -6 'ಭೂಮಾಪನ ಮತ್ತು ಭೂ ದಾಖಲಾತಿಗಳು' ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅವರು ಉದ್ಘಾಟನೆ ನೆರವೇರಿಸಿ ಮಾತನಾಡಿ, ಅತ್ಯಂತ ಆಸಕ್ತಿಕರವು ಉಪಯುಕ್ತವೂ ಆದ ಭೂಮಾಪನಾ ಮತ್ತು ಭೂದಾಖಲೆಗಳ ವಿಸ್ತೃತ ಜ್ಞಾನ ವಕೀಲರು ಮತ್ತು ನ್ಯಾಯಾಧೀಶರಿಗೂ ಅತ್ಯಗತ್ಯವಾಗಿದೆ. ಈ ಬಗ್ಗೆ ಸಂಪನ್ಮೂಲ ತಜ್ಞರಿಂದ ಏರ್ಪಡಿಸಿರುವ ಉಪನ್ಯಾಸದ ಪೂರ್ಣ ಲಾಭ ಪಡೆಯಬೇಕೆಂದು ಪ್ರತಿಪಾದಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಆರ್. ಎನ್. ಪ್ರವೀಣ ಕುಮಾರ್ ಅವರು, ಭಾರತದಲ್ಲಿ ಆಡಳಿತ ನಡೆಸಿದ ಬ್ರಿಟಿಷ್ ಸರ್ವೆ ಅಧಿಕಾರಿಗಳು, ಭೂಮಾಪನವನ್ನು ಅತ್ಯಂತ ಶ್ರದ್ಧೆಯಿಂದ ಮಾಡಿರುವುದಕ್ಕೆ ಸರ್ವೆ ಮಾಡಿರುವ ಸ್ಥಳಗಳಲ್ಲಿ 5 ರಿಂದ 6 ಅಡಿ ಎತ್ತರದ ಕಲ್ಲುಗಳನ್ನು ನೆಲದಾಳದಲ್ಲಿ ಹೂಳಿರುವುದೇ ಸಾಕ್ಷಿಯಾಗಿದ್ದು, ಭೂ ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ಭೂಮಾಪನ ಮತ್ತು ಭೂದಾಖಲೆಗಳು ತುಂಬಾ ಉಪಯುಕ್ತ ಎಂದು ತಿಳಿಸಿದರು.

ಕೌಟುಂಬಿಕ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಬಿ. ದಶರಥ್ ಮಾತನಾಡಿ, ಭೂಮಾಪನಕ್ಕೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳನ್ನು ಹಾಗೂ ಅಳತೆಯ ತಾಂತ್ರಿಕ ವಿಷಯಗಳನ್ನು ಮನದಟ್ಟು ಮಾಡಿಕೊಂಡಲ್ಲಿ ಪಾಟಿ ಲಿವರ್ ಸವಾಲಿನ ಸಂದರ್ಭಗಳಲ್ಲಿ ವಕೀಲರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ದಾವಣಗೆರೆ ಭೂ ಮಾಪನಾ ಇಲಾಖೆ ನಿವೃತ್ತ ಪರ್ಯಾಯ ವೀಕ್ಷಕರಾದ ಡಾ. ಎನ್. ರಂಗನಾಥ್ ಅವರು ಮಾತನಾಡಿ, ಕ್ರಿ.ಶ.1620ರಷ್ಟು ಹಿಂದೆಯೇ ಭೂಮಾಪನ ಪ್ರಕ್ರಿಯೆ ಚಾಲನೆಯಲ್ಲಿದೆ. ಆಡಳಿತ ನಿಯಂತ್ರಣ, ಭೂಕಂದಾಯ ನಿಗದಿಪಡಿಸಲು ಬೇಕಾಗಿರುವ ನಕ್ಷೆಗಳ ರಚನೆ, ಗಡಿಗಳ ರಕ್ಷಣೆ ಭೂಮಾಪನದ ಪ್ರಮುಖ ಉದ್ದೇಶವಾಗಿದ್ದವು. ಮೂಲಮಾಹಿತಿಗಳು ಅಂದಿನಿಂದ ಇಂದಿನವರೆಗೂ ಉಳಿದುಬಂದಿರುವುದು ಗಮನಾರ್ಹ ಎಂದರು. ಕ್ರಿ.ಶ. 1620ರಲ್ಲಿ ಎಡ್ಮಂಡ್ ಗಂಟೇರ್ ಎಂಬ ಗಣಿತಜ್ಞರು ರೂಪಿಸಿದ್ದ 33 ಅಡಿ ಉದ್ದದ ಕಬ್ಬಿಣದ ಸರಪಳಿ ಒಂದು ಕೌತುಕದ ಸಂಗತಿಯಾಗಿದ್ದು, ನಿರ್ದಿಷ್ಟ ಆಕಾರವಿಲ್ಲದ ಜಮೀನುಗಳನ್ನು ಅಳೆಯಲು ರೂಪಿಸಿದ ತಂತ್ರಗಳು ಅಚ್ಚರಿಯಾಗುವಂತವು ಎಂದು ತಿಳಿಸಿದರು.

ಪ್ರತಿ 30 ವರ್ಷಗಳಿಗೊಮ್ಮೆ ಪುನರ್ ಸರ್ವೆ ಕೆಲಸ ನಡೆಯಬೇಕೆಂಬುದು ಒಂದು ಪದ್ಧತಿ. ಆದರೆ ಭಾರತದಲ್ಲಿ ಕಳೆದ 150 ವರ್ಷಗಳಿಂದ ಪುನರ್ ಸರ್ವೆಯಾಗದೇ ಇರುವುದರಿಂದ ಭೂಮಾಪನದಲ್ಲಿ ಅನೇಕ ಗೊಂದಲಗಳು ಉಂಟಾಗಿ ವ್ಯಾಜ್ಯ ವಿವಾದಗಳು ಹೆಚ್ಚಾಗುತ್ತಿವೆ ಎಂದು ತಿಳಿಸಿದರು.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ**

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಅವರು, ನ್ಯಾಯವಾದಿಗಳ ವೃತ್ತಿ ಕೌಶಲ್ಯದ ವೃದ್ಧಿಗಾಗಿ ಸ್ಥಳೀಯ ಪ್ರತಿಭೆಗಳನ್ನು ಉಪಯೋಗಿಸಿಕೊಂಡು ಹಲವಾರು ಉಪನ್ಯಾಸಗಳನ್ನು ಮುಂದೆಯೂ ಆಯೋಜಿಸುವುದಾಗಿ ತಿಳಿಸಿದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ಶಿವಪ್ಪ ಗಂಗಪ್ಪ ಸಲಗೆರೆ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಜಿ.ಕೆ.ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್. ಬಸವರಾಜ್, ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್. ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ. ಚೌಡಪ್ಪ, ಟಿ.ಹೆಚ್. ಮಧುಸೂದನ್, ಎಲ್. ನಾಗರಾಜ್, ಕೆ.ಎಂ. ನೀಲಕಂಠಯ್ಯ, ಎಂ. ರಾಘವೇಂದ್ರ, ಜಿ.ಜೆ. ಸಂತೋಷ್ ಕುಮಾರ್, ಶ್ರೀಮತಿ ಭಾಗ್ಯಲಕ್ಷ್ಮಿ, ಬಿ. ಅಜ್ಜಯ್ಯ ಹಾಗೂ ಇತರರು ಹಾಜರಿದ್ದರು.

## 50 ಲಕ್ಷ ರೂ. ಪಡೆದೂ ಪ್ರಕರಣ ಬಿಡದ ವಿಚ್ಛೇದಿತೆ :

### ಲಕ್ಷ ರೂ. ದಂಡ ವಿಧಿಸಿದ ಹೈಕೋರ್ಟ್

ಇಂದೋರ್, ಮಾ. 6 – ವೈವಾಹಿಕ ವಿವಾದವನ್ನು ಪರಸ್ಪರ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ಸಮ್ಮತಿಸಿದ ನಂತರವೂ, ಮಾಜಿ ಪತಿ ಹಾಗೂ ಅವರ ವೃದ್ಧ ತಂದೆ - ತಾಯಿಗಳ ವಿರುದ್ಧ ಪ್ರಕರಣ ಮುಂದುವರೆಸಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಮಧ್ಯ ಪ್ರದೇಶ ಹೈಕೋರ್ಟ್, ವಿಚ್ಛೇದಿತ ಮಹಿಳೆಗೆ ಲಕ್ಷ ರೂ. ದಂಡ ವಿಧಿಸಿದೆ. ಮಹಿಳೆ ನ್ಯಾಯಿಕ ಪ್ರಕ್ರಿಯೆಯ ದುರುಪಯೋಗ ಪಡಿಸಿಕೊಂಡಿರುವುದಾಗಿ ನ್ಯಾಯಮೂರ್ತಿ ಸುಬೋಧ್ ಅಭಯಂಕರ್ ಅವರ ಏಕ ಸದಸ್ಯ ಪೀಠ ತಿಳಿಸಿದೆ. ಇಂದೋರ್ ನಿವಾಸಿಯಾದ ಮಹಿಳೆ ಕಳೆದ ವರ್ಷ ಫೆಬ್ರವರಿಯಲ್ಲಿ ಪರಸ್ಪರ ಸಮ್ಮತಿಯ ಮೂಲಕ ಗಂಡನಿಂದ ವಿಚ್ಛೇದನ ಪಡೆಯುವುದಾಗಿ ತಿಳಿಸಿದ್ದರು. ಇದಕ್ಕಾಗಿ 50 ಲಕ್ಷ ರೂ. ಪಡೆಯಲು ಸಮ್ಮತಿಸಿದ್ದರು.

ಗಂಡ ಹಾಗೂ ಅವರ ತಂದೆ - ತಾಯಿ ವಿರುದ್ಧ ದಾಖಲಿಸಿದ್ದ ಕ್ರೌರ್ಯ, ಅಪರಾಧಿಕ ಬೆದರಿಕೆ ಹಾಗೂ ಇತರೆ ಆರೋಪಗಳ ಮೇಲೆ ಐದು ವರ್ಷದ ಹಿಂದೆ ದಾಖಲಿಸಿದ್ದ ದೂರು ವಾಪಸ್ ಪಡೆಯುವುದಾಗಿ ಹೇಳಿದ್ದರು. ಅದರಂತೆ ಫೆಬ್ರವರಿ 2, 2023ರಲ್ಲಿ ಪರಸ್ಪರ ಸಮ್ಮತಿಯೊಂದಿಗೆ ವಿಚ್ಛೇದನ ಪಡೆಯಲಾಗಿತ್ತು. ಮಹಿಳೆಗೆ 50 ಲಕ್ಷ ರೂ.ಗಳನ್ನು ಪಾವತಿಸಲಾಗಿತ್ತು. ಆದರೆ, ಹಣ ಪಡೆದ ನಂತರ ಮಹಿಳೆ ಪ್ರಕರಣ ವಾಪಸ್ ಪಡೆದಿರಲಿಲ್ಲ.

2000ದಲ್ಲಿ ದಂಪತಿ ಮದುವೆಯಾಗಿದ್ದರು. ಅವರಿಗೆ ಈಗ 20 ವರ್ಷದ ಹೆಣ್ಣು ಮಗಳಿದ್ದು, ವಿಚ್ಛೇದನದ ನಂತರ ತಂದೆಯ ಜೊತೆಗಿದ್ದಾರೆ. ವರದಕ್ಷಿಣ ಬೆದರಿಕೆ, ಹಲ್ಲೆ ಇತ್ಯಾದಿ ಪ್ರಕರಣಗಳನ್ನು ತಳ್ಳಿ ಹಾಕಿರುವ ಹೈಕೋರ್ಟ್, ಮಾಜಿ ಗಂಡನಿಗೆ 1 ಲಕ್ಷ ರೂ. ಪರಿಹಾರ ನೀಡುವಂತೆ ಆದೇಶಿಸಿದೆ.

## ಎಲ್ಲರನ್ನೂ ಮನುಷ್ಯತ್ವದಿಂದಲೇ ಕಾಣಬೇಕು

### ಉಡುಪು, ಆಹಾರ ವಿತರಣೆಯಲ್ಲಿ ಶಿಕ್ಷಕ ಕೊಟ್ರೇಶ್



**ಹರಿಹರ**

ಹರಿಹರ, 5- ಮನುಷ್ಯ ಜನ್ಮದಲ್ಲಿ ಹುಟ್ಟಿದ ನಾವುಗಳು ಎಲ್ಲರನ್ನೂ ಮನುಷ್ಯತ್ವ ದಿಂದಲೇ ಕಾಣಬೇಕು. ಮನುಷ್ಯರನ್ನು ಪ್ರೀತಿಸ ಬೇಕು, ಗೌರವಿಸಬೇಕು, ಆದರಿಸಬೇಕು. ಇಲ್ಲದಿದ್ದರೆ ನಾವು ಮನುಷ್ಯರಾಗಿ ಇರಲು ಯೋಗ್ಯರಾಗಿರುವುದಿಲ್ಲ ಎಂದು ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಕೊಟ್ರೇಶ್ ಹಳ್ಳಿ ಹೇಳಿದರು.

ಹೊಂಗಿರಣ ಸೇವಾ ಟ್ರಸ್ಟ್ ಮತ್ತು ನಾರಾಯಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಆಶ್ರಯದಲ್ಲಿ ಅಮರಾವತಿ ಬಡಾವಣೆಯ ಸುಧಾಮ ಹೋಮ್ಸ್ ಆಶ್ರಮದ ನಿರಾಶ್ರಿತರಿಗೆ ಹಮ್ಮಿಕೊಳ್ಳಲಾಗಿದ್ದ ಉಡುಪು ಮತ್ತು ಆಹಾರ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೊಂಗಿರಣ ಸೇವಾ ಟ್ರಸ್ಟ್‌ನ ಕಾರ್ಯದರ್ಶಿಗಳು ಮತ್ತು ನಾರೇಯಣ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕರೂ ಆದ ಎನ್.ಬಿ.ಗಣೇಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಹಕಾರಿ ಸಂಘದ ಉಪಾಧ್ಯಕ್ಷರು ಹಾಗೂ ಹೊಂಗಿರಣ ಸೇವಾ ಟ್ರಸ್ಟಿನ ಖಜಾಂಚಿ ವಿಷ್ಣುಮೂರ್ತಿ ಎಸ್. ಎನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹೆಚ್. ಎನ್, ಮರಿಸ್ವಾಮಿ, ನವೀನ್, ರಾಕೇಶ್, ಪ್ರಸನ್ನ, ಹರೀಶ್, ಗಿರೀಶ್, ಮಂಜಪ್ಪ, ಅಶ್ಫಾಕ್ ಉಪಸ್ಥಿತರಿದ್ದರು.

# ಕೆ.ಬೇವಿನಹಳ್ಳಿ ಶಾಲೆ ಸಬಲೀಕರಣ : ಶಾಸಕ ಹರೀಶ್ ಉದ್ಘಾಟನೆ



ಹರಿಹರ,ಮಾ.6- ತಾಲ್ಲೂಕಿನ ಕೆ.ಬೇವಿನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಎಲ್.ಕೆ.ಜಿ. ಮತ್ತು ಯು.ಕೆ.ಜಿ ಶಾಲೆಯ ಸಬಲೀಕರಣ ಹಾಗೂ ಪೀಠೋಪಕರಣಗಳ ಉದ್ಘಾಟನೆಯನ್ನು ಶಾಸಕ ಬಿ.ಪಿ. ಹರೀಶ್ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ರೇಖಾ ಬಿ. ಎಂ. ಹಾಲೇಶ್, ಯಶೋಧ ಜಿ.ಕೆ. ಉಮಾ ಮಹೇಶ್, ಮಂಜುಳಾ, ಮಂಜಪ್ಪ, ಮಹೇಶ್ವರಪ್ಪ, ಎಂ. ಬಸವರಾಜ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ. ಇಸಿಓ ಮಂಜುನಾಥ್. ಬಿ ಆರ್ ಸಿ ತಿಪ್ಪೇಸ್ವಾಮಿ. ಬಿ ಆರ್ ಪಿ ಶ್ರೀಮತಿ ಭಾಗ್ಯಲಕ್ಷ್ಮಿ, ಮುಖ್ಯೋಪಾಧ್ಯಾಯರಾದ ಇಂದ್ರಮ್ಮ ಎನ್‌ಪಿಎಸ್ ನೌಕರರ ಸಂಘದ ಕಾರ್ಯದರ್ಶಿ ಸಂಗಣ್ಣನವರ್ ಹಾಗೂ ಮುಖಂಡರಾದ ನಾಗರಾಜ್ ಅಂಗಡಿ, ಭಾಗ್ಯಮ್ಮ ಸವಿತಾ, ಗುರುಬಸವರಾಜ್, ಗುರುಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರದ ಬ್ರಹ್ಮಾಕುಮಾರೀಸ್ ಸಂಸ್ಥೆಯಿಂದ ನಾಳೆ ಮಹಾಶಿವರಾತ್ರಿ, ಮಹಿಳಾ ದಿನಾಚರಣೆ

ಹರಿಹರ, ಮಾ. 6- ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ನಾಡಿದ್ದು ದಿನಾಂಕ 8ರ ಶುಕ್ರವಾರ ಮಹಾಶಿವರಾತ್ರಿ ಕಾರ್ಯಕ್ರಮ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಮುಖ್ಯಸ್ಥರಾದ ಶಿವದೇವಿ ಅಮ್ಮನವರು ತಿಳಿಸಿದ್ದಾರೆ. ಶಿವರಾತ್ರಿ ಪ್ರಯುಕ್ತ ಸಂಕರ್ಷಣ ನೃತ್ಯಾಲಯದ ಗುರು ಹಾಗೂ ಶಿಷ್ಯ ವೃಂದದಿಂದ ಶಿವ ತಾಂಡವ ಮತ್ತು ಅರ್ಧನಾರೀಶ್ವರ ನೃತ್ಯ, ನಂತರ ದ್ವಾದಶ ಜ್ಯೋತಿರ್ಲಿಂಗಗಳ ಶೋಭಾಯಾತ್ರೆ ಹಾಗೂ ವಿಶೇಷವಾಗಿ ಅಮರನಾಥ ದರ್ಶನ ಏರ್ಪಡಿಸಲಾಗಿದೆ.

# ಎಲ್ಲರ ಮನೆಯಲ್ಲಿ ಮಾನವರು ಹುಟ್ಟುತ್ತಾರೆ, ಮನುಷ್ಯತ್ವ ಹುಟ್ಟುವುದಿಲ್ಲ : ಬಸವಪ್ರಭು ಶ್ರೀ



ಚಿತ್ರದುರ್ಗ, ಮಾ. 6 - ಎಲ್ಲರ ಮನೆಯಲ್ಲು ಮಾನವರು ಹುಟ್ಟುತ್ತಾರೆ. ಆದರೆ ಮನುಷ್ಯತ್ವ ಹುಟ್ಟುವುದಿಲ್ಲ. ಪ್ರತಿ ಮನೆಯಲ್ಲಿ ಮಾನವೀಯತೆ ಕಾರ್ಯಗಳು ನಡೆದಾಗ ಆ ಮನೆಯ ಮಾನವ ನಿಜವಾದ ಮಾನವ. ಇಲ್ಲವಾದರೆ ದಾನವನಾಗುತ್ತಾನೆ ಎಂದು ಶ್ರಿ ಬಸವಪ್ರಭು ಸ್ವಾಮೀಜಿ ನುಡಿದರು.

ನಗರದ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ನಡೆದ ಮೂವತ್ನಾಲ್ಕನೇ ವರ್ಷದ ಮೂರನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಇಂದಿನ ದಿನಗಳಲ್ಲಿ ಮದುವೆ ಆದ ನಂತರ ಅತ್ತೆ-ಮಾವ, ತಂದೆ-ತಾಯಿಯನ್ನು ದೂರವಿಡುತ್ತಾರೆ. ದೂರವಿಡಬಾರದ ಮನೆಯಲ್ಲಿ ಪ್ರಾಣಿ ಪಕ್ಷಿಗಳನ್ನು ಸಾಕುತ್ತಾರೆ. ಅವುಗಳ ಮೇಲೆ ತೋರಿಸುವ ಪ್ರೀತಿ-ಕರುಣೆಯನ್ನು ಹಿರಿಯ ಜೀವಗಳ ಮೇಲೆ ತೋರಿಸಬೇಕು. ಅವರೊಟ್ಟಿಗೆ ಕೂಡಿ ಬಾಳುವುದರಿಂದ ಕುಟುಂಬದಲ್ಲಿ ನೆಮ್ಮದಿ ಸಾಧ್ಯವಾಗುತ್ತದೆ. ನಾವು ಮಾನವರಾಗಿ ಹುಟ್ಟುತ್ತೇವೆ. ಮಾನವರ ಜತೆ ಮಾನವತೆಯ ಪ್ರೀತಿಯಿರಬೇಕು. ಆಗ ಅವನ ಜೀವನ ಸಾರ್ಥಕವೆಂದರು. ಮಾನವತೆಯಿಲ್ಲದಾಗ ಅವನು ದಾನವನಾಗುತ್ತಾನೆ. ಜಗತ್ತಿನಲ್ಲಿ ಮಾನವೀಯತೆ ದೊಡ್ಡದು. ವಧು-ವರರು ಹಿರಿಯರನ್ನು ಮಾನವೀಯ ಗುಣಗಳಿಂದ ಕಾಣಬೇಕೆಂದರು.

ಶ್ರೀ ಪ್ರಭುಲಿಂಗ ಸ್ವಾಮೀಜಿ ಮಾತನಾಡಿ, ಚಿತ್ರದುರ್ಗ ಮುರುಘಾ ಮಠದಲ್ಲಿ ಬಡವರ ಕಲ್ಯಾಣ ನಡೆಸಿಕೊಡುವುದರ ಮುಖೇನ ಆರ್ಥಿಕವಾಗಿ ದುರ್ಬಲರಾಗಿರುವ ಬಡವರ ಬದುಕನ್ನು ಕಟ್ಟಿಕೊಳ್ಳಲು ನೆರವಾಗಿರುವುದು ಸ್ಮರಣೀಯ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ತಾಜ್‌ಪೀರ್ ಮಾತನಾಡಿದರು. ಕಾರ್ಯಕ್ರಮದಲ್ಲಿ 8 ಜೋಡಿಗಳ ವಿವಾಹ ನೆರವೇರಿಸಲಾಯಿತು.

ಜಮುರಾ ಕಲಾ ಲೋಕದ ಕಲಾವಿದರು ಪ್ರಾರ್ಥಿಸಿದರು. ವೀರಭದ್ರಪ್ಪ ಸ್ವಾಗತಿಸಿದರು. ಟಿ.ಪಿ. ಜ್ಞಾನಮೂರ್ತಿ ನಿರೂಪಿಸಿದರು.


**ತಕ್ಷಣ ಬೇಕಾಗಿದ್ದಾರೆ**

ಕಾಮರ್ಸ್ ಮಾಸ್ಟರ್ ಡಿಗ್ರಿ, ಡಿಗ್ರಿ ಪಡೆದಿರುವ ಯುವಕರು ತಕ್ಷಣ ಬೇಕಾಗಿದ್ದಾರೆ.

ಸಂಪರ್ಕಿಸಿ :

ಫೋನ್. : 99863 46490

**ಆತ್ಮೀಯ ರೈತ ಬಂಧುಗಳಿಗೆ**

ನಮ್ಮಲ್ಲಿ ಅಡಿಕೆ, ಭತ್ತ, ತೆಂಗು, ಮೆಕ್ಕೇಜೋಳ, ತರಕಾರಿಗಳು, ಹಣ್ಣುಗಳು ಮುಂತಾದ ಎಲ್ಲಾ ಬೆಳೆಗಳಿಗೂ ಪೋಷಕಾಂಶಗಳಿಂದ ತುಂಬಿದ ಸರ್ವಶ್ರೇಷ್ಠ, ಸರ್ವೋತ್ಕೃಷ್ಟ ಸಾವಯವ ಗೊಬ್ಬರ ಮತ್ತು ಎಲ್ಲಾ ಬೆಳೆಯ ಎಲ್ಲಾ ರೋಗಗಳಿಗೂ ಔಷಧಿಗಳು ಮತ್ತು ಆಪ್ತಮಿತ್ರ ಹಸುಗಳ ಪೋಷಕಾಂಶಗಳು ಮತ್ತು ಹಸುಗಳ ರಕ್ತ ಹೀರುವ ಸೊಳ್ಳೆ, ನೊಣಗಳ ಸಂಪೂರ್ಣ ನಿವಾರಣೆಗೆ ಸುರಕ್ಷತಾ ಔಷಧಿಗಳು ನಮ್ಮ ಸಿಗುತ್ತವೆ. ಈ ಎಲ್ಲದಕ್ಕೂ ನಿಸ್ಸಂಶಯವಾಗಿ ಪಕ್ಕಾಒಳ್ಳೆಯ ಪರಿಣಾಮವಿರುತ್ತದೆ.

ನಮ್ಮೊಂದಿಗೆ ಒಮ್ಮೆ ಮಾತನಾಡಿ:

ಫೋನ್. : 90084 93279


**ಮಾನ್ಯ ಗೌರವಾನ್ವಿತ 2ನೇ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. (ಕಿ.ವಿ) ನ್ಯಾಯಾಲಯ ದಾವಣಗೆರೆ**

ಸಿ.ಆರ್.ಮಿಸ್. ನಂ. 272/2024

ಅರ್ಜಿದಾರರು : ಕೆ.ಎಂ. ನವೀನ್ ಬಿನ್ ಕೆ.ಸಿ.ಮುರುಗೇಂದ್ರಪ್ಪ, ವಯಸ್ಸು 51 ವರ್ಷ, ಬ್ಯುಸಿನೆಸ್, ವಾಸ #775/1, 2ನೇ ಮೇನ್, 7ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ. ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ಮಹಾನಗರ ಪಾಲಿಕೆ, ದಾವಣಗೆರೆ.

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು**

ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿದಾರರ ತಾಯಿ ಲೇಟ್ ಕೆ.ಸಿ.ರುದ್ರಮ್ಮ ಕೋಂ ಮುರುಗೇಂದ್ರಪ್ಪ ಕೆ.ಸಿ. ಇವರು ದಿನಾಂಕ : 12-04-1998 ರಂದು # 775/1, 2ನೇ ಮೇನ್, 7ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆಯ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದ್ದಂತೆ ಯಾರದಾದರು ತಕರಾರು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸದಿದ್ದಲ್ಲಿ ದಿ. 8-4-2024 ರಂದು ಖುದ್ದು ಹಾಜರಾಗಿ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು.

ತಪ್ಪಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮುದ್ರೆ ಹಾಗೂ ಸಹಿಯೊಂದಿಗೆ ದಿನಾಂಕ: 6-3-2024 ರಂದು ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
**(ಅರುಣ್ ಬಿ. ಕೌಜಲಗಿ)**
ದಿನಾಂಕ : 06.03.2024
ಸ್ಥಳ : ದಾವಣಗೆರೆ

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು**
ಮಾನ್ಯ 2ನೇ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ (ಕಿ.ವಿ) ನ್ಯಾಯಾಲಯ, ದಾವಣಗೆರೆ.

**ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಲಯ, ದಾವಣಗೆರೆ**

**ಅಸಲು ದಾವಾ ನಂ. 146/2023**

**ವಾದಿ :** ಶ್ರೀ ಕರಿಬಸಪ್ಪ

**ವಿರುದ್ಧ**

**ಪ್ರತಿವಾದಿಗಳು :** ಶ್ರೀ ಮಂಜುನಾಥ ಆರ್.ಎಸ್. ಮತ್ತು ಇತರರು

**ಪ್ರತಿವಾದಿ :** 2. ಶ್ರೀಮತಿ ಪುಷ್ಪಾ ಕೋಂ ಮಂಜುನಾಥ್ ಆರ್.ಎಸ್. ವಯಸ್ಸು 38 ವರ್ಷ, ವಾಸ: ಎಲ್.ಐ.ಜಿ.141, ನ್ಯೂ ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, ಕೊಟ್ಟೂರು ರಸ್ತೆ, ಹರಪನಹಳ್ಳಿ, ವಿಜಯನಗರ ಜಿಲ್ಲೆ.

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ವಾದಿಯು ಪ್ರತಿವಾದಿಯರ ವಿರುದ್ಧ ಮಾಲೀಕರು ಹಾಗೂ ಅನುಭವದಾರರು ಎಂದು ಕೋರಿ ಸದರಿ ದಾವೆಯನ್ನು ಸಲ್ಲಿಸಿದ್ದು, ಪ್ರತಿವಾದಿ ನಂ.2 ರವರಿಗೆ ನ್ಯಾಯಾಲಯದಿಂದ ಹೊರಡಿಸಲಾಗಿರುವ ಸಮನ್ಸ್/ನೋಟೀಸ್ ಹಾಗೂ ಅಂಚೆ ನೋಟೀಸ್ ಇತ್ಯಾದಿಗಳನ್ನು ಉದ್ದೇಶ ಪೂರ್ವಕವಾಗಿ ಸ್ವೀಕರಿಸದೇ ಹಿಂದಿರುಗಿಸಿರುವ ಪ್ರಯುಕ್ತ ತಮಗೆ ಸಾರ್ವಜನಿಕ ನೋಟೀಸನ್ನು ಈ ಮೂಲಕ ಹೊರಡಿಸುತ್ತಿದ್ದು, ದಿನಾಂಕ: 23-4-2024 ರಂದು ಬೆಳಿಗ್ಗೆ 11.00 ಗಂಟೆಯ ಸಮಯದಂದು ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ನ್ಯಾಯಾಲಯವು ಮುಂದಿನ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 22-2-2024 ರಂದು ಹೊರಡಿಸಲ್ಪಟ್ಟಿದೆ.

ವಾದಿಯ ಪರ ವಕೀಲರು
**(ಎಂ.ಎಸ್. ರಾಜಕುಮಾರ್)**
ಸ್ಥಳ : ದಾವಣಗೆರೆ
ದಿನಾಂಕ : 22.02.2024

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು**
2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯ, ದಾವಣಗೆರೆ

## ಹರಿಹರದಲ್ಲಿ 'ನಾರಿ ಶಕ್ತಿ' ವಂದನಾ ಕಾರ್ಯಕ್ರಮ



ಹರಿಹರ, ಮಾ, 6- ನಗರದ ಬಿಜೆಪಿ ಕಚೇರಿಯ ಸಭಾಂಗಣದಲ್ಲಿ 'ನಾರಿ ಶಕ್ತಿ' ವಂದನಾ ಕಾರ್ಯಕ್ರಮ ನಡೆಯಿತು. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿಯವರು ಮಾಡಿದ ಭಾಷಣವನ್ನು ನೇರವಾಗಿ ವೀಕ್ಷಿಸಲಾಯಿತು.

ಈ ವೇಳೆ ಶಾಸಕ ಬಿ.ಪಿ. ಹರೀಶ್ ಮಾತನಾಡಿ ಪ್ರಧಾನಿ ನರೇಂದ್ರ ಮೋದಿಯವರು ಮಾಡಿರುವ ಹಲವಾರು ಪ್ರಗತಿಪರ ಅಭಿವೃದ್ಧಿ ಕಾರ್ಯಗಳನ್ನು ಪಕ್ಷದ ಮುಖಂಡರು, ಕಾರ್ಯಕರ್ತರು ಈಗಾಗಲೇ ಹಲವಾರು ದಿನಗಳಿಂದ ಮನೆಗೆ ಭೇಟಿ ಕೊಟ್ಟು ಸಾರ್ವಜನಿಕರಿಗೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಸುವ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಪ್ಪ ಐರಣಿ, ಬಿಜೆಪಿ ಘಟಕದ ನಗರ ಅಧ್ಯಕ್ಷ ಅಜಿತ್ ಸಾವಂತ್, ನಗರಸಭೆ ಸದಸ್ಯೆ ಅಶ್ವಿನಿ ಕೃಷ್ಣ, ಮಾಜಿ ಸದಸ್ಯೆ ಅಂಬುಜಾ ಪಿ. ರಾಜೊಳ್ಳಿ, ಪ್ರಮೀಳಾ ನಲ್ಲೂರು, ಸಾಕ್ಷಿ ಸಿಂಧೆ, ರೂಪಾ ಶಶಿಕಾಂತ್, ಸುಧಾ ಸೋಳಂಕಿ, ಸುಮನ್ ಖಮಿತ್ಕರ್, ಬೆಳ್ಳೂಡಿ ಗೀತಮ್ಮ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಸೈಬರ್ ಸೆಕ್ಯೂರಿಟಿ ನೀತಿ ಜಾರಿ

**(1ನೇ ಪುಟದಿಂದ)** ಸಿಐಡಿ ಕಚೇರಿಯಲ್ಲಿ ಸ್ಥಾಪಿಸಿರುವ ಸಿಸಿಐಟಿಆರ್‌ನಲ್ಲಿ ಆಯೋಜಿಸುವ ತರಬೇತಿ ಕಾರ್ಯಕ್ರಮಗಳ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದೂ ಅವರು ಹೇಳಿದರು.

ಸೈಬರ್ ಅಪರಾಧಿಗಳು ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಕುಳಿತುಕೊಂಡು ಬೆದರಿಕೆ, ವಂಚನೆ ಸೇರಿದಂತೆ ಅನೇಕ ರೀತಿಯ ಸೈಬರ್ ದಾಳಿ ನಡೆಸುತ್ತಾರೆ, ಇದರಿಂದ ಆಯಾ ವಲಯದ ಮಾರುಕಟ್ಟೆ ಮತ್ತು ಹೂಡಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ, ಇಂತಹ ಅಪರಾಧಿಗಳನ್ನು ಮಟ್ಟಹಾಕಲು ಜಾಗತಿಕ ಮಟ್ಟದ ಸಹಯೋಗ ಅಗತ್ಯವಿದೆ ಎಂದರು. ಡೀಪ್‌ಫೇಕ್, ಅಕ್ರಮ ಹಣ ವರ್ಗಾವಣೆ, ಆನ್ಲೈನ್ ಬ್ಯಾಂಕಿಂಗ್, ಲೋನ್ ಆ್ಯಪ್ ವಂಚನೆ ಸೇರಿದಂತೆ ಹಲವು ಪ್ರಕರಣಗಳು ಹೆಚ್ಚಾಗುತ್ತಿವೆ, ಗಂಭೀರ ಪ್ರಕರಣಗಳಲ್ಲಿ ವಿದೇಶಿ ಕಂಪನಿಗಳ ನೆರವು ಸಿಗದಿದ್ದರೆ ತನಿಖೆ ಕಷ್ಟವಾಗುತ್ತದೆ ಎಂದು ಪರಮೇಶ್ವರ್ ಹೇಳಿದರು.

ಸೈಬರ್ ಕ್ರೈಂ ಜಾಗತಿಕ ಸವಾಲು ಮತ್ತು ಸಮಸ್ಯೆಯಾಗಿದೆ, ಹಲವು ಸಂಸ್ಥೆಗಳು ಸೈಬರ್ ಅಪರಾಧ ತಡೆಗಟ್ಟಲು ಸಂಶೋಧನೆ ನಡೆಸುತ್ತಿವೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

# ಬರ : ನೀರಿನ ಕೊರತೆಯಾಗದಂತೆ ಕ್ರಮ ವಹಿಸಿ

**(1ನೇ ಪುಟದಿಂದ)** ಮೇಲೆ ಕ್ರಮ ಜರುಗಿಸಲು ಸೂಚನೆ ನೀಡಲಾಯಿತು.

ಹೊನ್ನಾಳಿ ಶಾಸಕರಾದ ಡಿ.ಜಿ.ಶಾಂತನಗೌಡರವರು ಕೆಲವರು ಕೆರೆ ಒತ್ತುವರಿ ಮಾಡುವ ಜೊತೆಗೆ ಸ್ಮಶಾನವನ್ನು ಒತ್ತುವರಿ ಮಾಡಿದ್ದಾರೆ ಎಂದಾಗ ಸರ್ಕಾರಿ ಜಾಗವನ್ನು ಗುರುತಿಸಿ ಒತ್ತುವರಿ ಮಾಡದಂತೆ ಬೀಟ್ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಮತ್ತು ಕೆರೆ ಒತ್ತುವರಿ ಬಗ್ಗೆ ಜಿಲ್ಲಾಧಿಕಾರಿಯವರು ಕ್ರಮ ಕೈಗೊಳ್ಳುವರೆಂದು ತಿಳಿಸಿದರು.

ಬರುವ ಜೂ.1ನೇ ತಾರೀಖಿನೊಳಗೆ ಎಲ್ಲಾ ಶಾಲೆಗಳಲ್ಲಿ ಶೌಚಾಲಯಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಕಟ್ಟಿಸುವಂತೆ ಶಾಸಕ ಶಿವಗಂಗಾ ಬಸವರಾಜ್ ಡಿಡಿಪಿಐ ಅವರಿಗೆ ಸೂಚಿಸಿದರು.

ಮಾಯಕೊಂಡದಲ್ಲಿ ರಾತ್ರಿ ಪಾಳೆಯಕ್ಕೆ ವೈದ್ಯರ ಅಗತ್ಯವಿದೆ ಎಂದಾಗ, ವೈದ್ಯರ ವಸತಿ ಗೃಹ ನಿರ್ಮಾಣ ಸಾಧ್ಯವಿದ್ದರೆ ಪ್ರಸ್ತಾವನೆ ಸಲ್ಲಿಸಿ, ವಸತಿಗೃಹವಾದರೆ ರಾತ್ರಿ ವೈದ್ಯರ ಕೊರತೆ ನೀಗುತ್ತದೆ ಎಂದು ಡಿಹೆಚ್ಓ ಅವರಿಗೆ ಸೂಚಿಸಿದರು.

ಉಕ್ಕಡಗಾತ್ರಿ ಅಜ್ಜಯ್ಯನ ದರ್ಶನಕ್ಕೆ ಬರುವ ಭಕ್ತಾದಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಜನರ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಕ್ರಮ ಕೈಗೊಳ್ಳುವಂತೆ ಶಾಸಕ ಹರೀಶ್ ಹೇಳಿದರೆ, ಹಳ್ಳಿಗಳಲ್ಲಿ ಜಾತ್ರೆಗಳು ನಡೆಯುತ್ತಿದ್ದು ಸ್ವಚ್ಛತೆಗೆ ಆದ್ಯತೆ ನೀಡುವಂತೆ ಬಸವಂತಪ್ಪ ಡಿಹೆಚ್ಓ ಅವರಿಗೆ ಸೂಚಿಸಿದರು.

ಸಭೆಯಲ್ಲಿ ಶಾಸಕರುಗಳಾದ ಬಿ.ಪಿ. ಹರೀಶ್, ಡಿ.ಜಿ. ಶಾಂತನಗೌಡ, ಶಿವಗಂಗಾ ಬಸವರಾಜ್, ಕೆ.ಎಸ್. ಬಸವಂತಪ್ಪ, ಜಿಲ್ಲಾಧಿಕಾರಿ ಡಾ.ವೆಂಟಕೇಶ್ ಎಂ.ವಿ, ಜಿ.ಪಂ. ಸಿಇಒ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

### ನೀರು ಕೊಟ್ಟು ನಂತರ ಕೆರೆ ತುಂಬಿಸಿಕೊಳ್ಳಿ

**(1ನೇ ಪುಟದಿಂದ)** ಆರೋಪಿಸಿದ್ದಾರೆ ಎಂದು ಮಾತಿನಲ್ಲೇ ತಿವಿದರು.

ಚನ್ನಗಿರಿ ಭಾಗಕ್ಕೂ ನೀರು ಬೇಕು. ದಾವಣಗೆರೆ ಭಾಗಕ್ಕೂ ನೀರು ಬೇಕು. ಕೊನೆ ಭಾಗಕ್ಕೆ ನೀರು ತಲುಪಿಸಿದರೆ ಆ ಭಾಗದ ಗ್ರಾಮಗಳಲ್ಲಿ ಬೋರ್‌ವೆಲ್‌ಗಳಲ್ಲಿ ನೀರಿನ ಮಟ್ಟ ಸುಧಾರಿಸಿ ಕುಡಿಯುವ ನೀರಿಗೆ ತೊಂದರೆಯಾಗುವುದಿಲ್ಲ. ಆದ್ದರಿಂದ ಅಕ್ರಮ ಪಂಪ್ ಸೆಟ್ ತೆರವುಗೊಳಿಸಲು ಬಿಗಿ ಕ್ರಮ ಕೈಗೊಂಡು ಮೊದಲು ಕೊನೆ ಭಾಗಕ್ಕೆ ನೀರು ತಲುಪಿಸಿ, ನಂತರ ಕೆರೆಗೆ ತುಂಬಿಸಿಕೋ ಎರಡೂ ಕಡೆಯ ಜನರು ಗಲಾಟೆ ಮಾಡದಂತೆ ನಿರ್ವಹಿಸಿ ಎಂದು ಸಚಿವ ಎಸ್ಸೆಸ್ಸೆಂ, ಚನ್ನಗಿರಿ ಶಾಸಕರಿಗೆ ಸಲಹೆ ನೀಡಿದರು.

### ನಮಗೂ ಹಸು ಕೊಡಿ ಎಂದ ಶಾಸಕರು

**(1ನೇ ಪುಟದಿಂದ)** ಕೊಡಿ ಎಂದರು. ಇದೊಂದು ಪ್ರಾಯೋಗಿಕ ಯೋಜನೆಯಾಗಿತ್ತು. ಆದ್ದರಿಂದ ಕೇವಲ ದಾವಣಗೆರೆ ತಾಲ್ಲೂಕಿನಲ್ಲಿ ಮಾತ್ರ ವಿತರಿಸಲಾಗಿದೆ ಎಂದು ಸಚಿವ ಮಲ್ಲಿಕಾರ್ಜುನ್ ಹೇಳಿದರು.

ಪ್ರತಿ ಹಸುವಿಗೆ 40 ಸಾವಿರ ಸಬ್ಸಿಡಿ ಹಾಗೂ ಜಿಲ್ಲಾ ಸಹಕಾರಿ ಬ್ಯಾಂಕ್‌ನಲ್ಲಿ ಸಾಲ ನೀಡಲಾಗುತ್ತದೆ. ಆದರೆ ಡಿಸಿಸಿ ಬ್ಯಾಂಕ್‌ನವರು ಸರಿಯಾಗಿ ಸಹಕರಿಸಲಿಲ್ಲ.

ಮುಂದಿನ ದಿನಗಳಲ್ಲಿ ಪಂಚಾಯ್ತಿ ಮಟ್ಟದಲ್ಲಿ ಫಲಾನುಭವಿಗಳ ಗುರುತಿಸಿ, ಎಲ್ಲಾ ತಾಲ್ಲೂಕುಗಳಿಗೂ ಯೋಜನೆ ವಿಸ್ತರಿಸಲಾಗುವುದು ಎಂದು ಎಸ್ಸೆಸ್ಸೆಂ ಹೇಳಿದರು.

### ಕರೆ ಕಟ್ಟೆಯಲ್ಲಿ ಬಾಡಿಗೆ ಕಟ್ಟದಿದ್ರೆ ಆಸ್ಪತ್ರೆಗೆ ಬೀಗ

ಚನ್ನಗಿರಿ ತಾಲ್ಲೂಕು ಕರೆಕಟ್ಟೆಯಲ್ಲಿ ಆಸ್ಪತ್ರೆಗೆ ಸಂಬಂಧಿಸಿದ ಜಾಗದ ವಿವಾದ ನ್ಯಾಯಾಲಯದಲ್ಲಿದೆ. ಬಾಡಿಗೆ ಮನೆಯಲ್ಲಿ ಆಸ್ಪತ್ರೆ ನಡೆಸಲಾಗುತ್ತಿದೆ. ಆದರೆ ಸರಿಯಾಗಿ ಬಾಡಿಗೆ ಕಟ್ಟದಿದ್ದರೆ ಮನೆ ಮಾಲೀಕರು ಬೀಗ ಹಾಕಿಕೊಂಡು ಹೋಗುತ್ತಾರೆ. ಇದರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ. ಶೀಘ್ರವೇ ಸಮಸ್ಯೆ ಬಗೆಹರಿಸಿ ಎಂದು ಜಿ.ಪಂ. ಸಿಇಒ ಅವರಿಗೆ ಎಂದು ಶಾಸಕ ಶಿವಗಂಗಾ ಬಸವರಾಜ್ ಹೇಳಿದರು.

## 10 ದಿನಗಳು 30 ಎಮ್‌ಸಿಎಫ್‌ಟಿ ನೀರು ಬಿಡಲು ತೀರ್ಮಾನ



**(1ನೇ ಪುಟದಿಂದ)** ಜಿಲ್ಲೆಗಳ ಇಂಜಿನಿಯರ್ ಮೂಲಕ ಕೆರೆಯ ನೀರಿನ ಮಟ್ಟದ ವಸ್ತುಸ್ಥಿತಿ ತಿಳಿಯಲು ಹಾಗೂ ರೈತರಿಗೆ ನೀರಿನ ಅಗತ್ಯ ಎಷ್ಟರಮಟ್ಟಿಗೆ ಇದೆ ಎಂಬ ವರದಿ ಪಡೆಯಲು ಸಭೆ ತೀರ್ಮಾನಿಸಿದ್ದು, ಕೆರೆಯಲ್ಲಿ ನೀರು ಡೆಡ್ ಸ್ಟೋರೇಜಾದರೆ ಅಗತ್ಯಕ್ಕೆ ಅನುಗುಣವಾಗಿ ರೈತರು ಟ್ಯಾಂಕರ್‌ನಲ್ಲಿ ನೀರು ಪಡೆಯಬಹುದಾಗಿದೆ. ಸಭೆಯಲ್ಲಿ ಇಂಜಿನಿಯರ್ ಆನಂದ್, ಚಿತ್ರದುರ್ಗ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಧಾಕೃಷ್ಣ, ಹೊನ್ನಾಳಿ ಸಣ್ಣ ನೀರಾವರಿ ಇಲಾಖೆ ಇಂಜಿನಿಯರ್ ವಿಕಾಸ್, ನ್ಯಾಮತಿ- ಹೊನ್ನಾಳಿ ತಹಶೀಲ್ದಾರ್ ಸೇರಿದಂತೆ ಅಚ್ಚುಕಟ್ಟಿನ ರೈತರು ಭಾಗವಹಿಸಿದ್ದರು.

ರಾಣೇಬೆನ್ನೂರಿನಲ್ಲಿ ಶಾಸಕ ಪ್ರಕಾಶ್ ನೇತೃತ್ವದಲ್ಲಿ

## ಶಿವರಾತ್ರಿ ವಿಶೇಷ ಕಾರ್ಯಕ್ರಮ



ರಾಣೇಬೆನ್ನೂರು, ಮಾ.6- ಶಾಸಕ ಪ್ರಕಾಶ ಕೋಳಿವಾಡ, ಪತ್ನಿ ಪೂರ್ಣಿಮಾ ಕೋಳಿವಾಡ ಸಾರಥ್ಯದ ಪಿಕೆಕೆ ಹಾಗೂ ಆನಂದ ಗಡ್ಡದ್ದೇವರಮಠ ಅವರು ಜಂಟಿಯಾಗಿ ಶಿವರಾತ್ರಿ ಹಾಗೂ ಮಹಿಳಾ ದಿನಾಚರಣೆ ಅಂಗವಾಗಿ ನಾಡಿದ್ದು ದಿನಾಂಕ 8ರಂದು ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ.

ಪೌರಾಣಿಕ ಪುರುಷರ ಹಾಗೂ ಮಹಿಳೆಯರ ವೇಷ ಭೂಷಣ ಸ್ಪರ್ಧೆ ನಡೆಯಲಿದ್ದು, ತಾಯಿ ಹಾಗೂ ಮಗು ಭಾಗವಹಿಸಬಹುದಾಗಿದೆ., ವಿಜೇತರಿಗೆ ಪ್ರಥಮ 15000/-, ದ್ವಿತೀಯ 10000/-, ತೃತೀಯ 7500/-ಬಹುಮಾನ ನೀಡಲಾಗುವುದು. ಭಾಗವಹಿಸುವ 8 ರಿಂದ 14 ವರ್ಷದ ಮಕ್ಕಳಿಗೆ, ಪ್ರಥಮ 10000/-, ದ್ವಿತೀಯ 7500/-, ತೃತೀಯ 5000/- ನಗದು, ಜೊತೆಗೆ ಭಾಗವಹಿಸುವ ಎಲ್ಲ ಸ್ಪರ್ಧಾಳುಗಳಿಗೆ ಸಮಾಧಾನಕರ ಬಹುಮಾನ ಕೊಡಲಾಗುವುದು.

ಅಂದು ಅಶೋಕ ಸರ್ಕಲ್‌ನಲ್ಲಿ ಸಂಜೆ 6 ಗಂಟೆಯಿಂದ 12 ಗಂಟೆವರೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ 'ಸರಿಗಮಪ' ಖ್ಯಾತಿಯ ಹನುಮಂತ ಲಮಾಣಿ, ಕಾಶೀಮ ಹಾಗೂ ರುಬಿಯಾ ಅವರಿಂದ ಮನರಂಜನೆ ಮತ್ತು ಸ್ಥಳೀಯ ಕಲಾವಿದರಿಂದ ಹಾಸ್ಯ ಕಾರ್ಯಕ್ರಮಗಳು ನಡೆಯಲಿವೆ ಎಂದು ಶಾಸಕ ಪ್ರಕಾಶ ಕೋಳಿವಾಡ ಪತ್ರಕರ್ತರಿಗೆ ತಿಳಿಸಿದ್ದಾರೆ.

## ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ವಿದ್ಯಾರ್ಥಿಗೆ ಬೇಕಿದೆ ಆರ್ಥಿಕ ನೆರವು

ದಾವಣಗೆರೆ, ಮಾ. 6- ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ಬಡ ಕುಟುಂಬದ ಇಂಜಿನಿಯರಿಂಗ್ ವಿದ್ಯಾರ್ಥಿ ಯೋಗೇಶ್ ಚಿಕಿತ್ಸೆಗೆ ದಾನಿಗಳು ನೆರವು ನೀಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆಯ ಹರಿಹರ ತಾಲ್ಲೂಕು ಅಧ್ಯಕ್ಷ ವೈ. ರಮೇಶ್ ಮಾನೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಟಿಜೆ ನಗರದ 26 ನೇ ವಾರ್ಡ್ ನಿವಾಸಿ, ಕೂಲಿ ಕಾರ್ಮಿಕ ಮಂಜುನಾಥ ಪುತ್ರ ಯೋಗೇಶ್ ಎರಡೂ ಕಿಡ್ನಿಗಳ ವೈಫಲ್ಯದಿಂದ ಬಳಲುತ್ತಿದ್ದು, ವಾರಕ್ಕೆ ಎರಡು ಬಾರಿ ಡಯಾಲಿಸಿಸ್ ಮಾಡಿಸಲಾಗುತ್ತಿದೆ.

ಯೋಗೇಶ್ ಶಿವಮೊಗ್ಗದ ಪೆಸೆಟ್ ಕಾಲೇಜಿನಲ್ಲಿ ಎಐ ವಿಭಾಗದಲ್ಲಿ ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದು, ಸ್ವತಃ ತಾಯಿಯೇ ಮಗನಿಗೆ ತನ್ನ ಒಂದು ಕಿಡ್ನಿ ನೀಡಲು ಮುಂದಾಗಿದ್ದಾರೆ. ಕಿಡ್ನಿಯ ಶಸ್ತ್ರ ಚಿಕಿತ್ಸೆಗೆ ಹತ್ತು ಲಕ್ಷ ರೂ. ವೈದ್ಯಕೀಯ ವೆಚ್ಚ ತಗುಲಿದೆ ಎಂದು ವೈದ್ಯರು ಹೇಳುತ್ತಾರೆ ಎಂದರು.

ದಾನಿಗಳು ಯೋಗೇಶ್ ನೆರವಿಗೆ ಧಾವಿಸಬೇಕು. ಕೆನರಾ ಬ್ಯಾಂಕ್ ಖಾತೆ ಸಂಖ್ಯೆ: 1590108026747, ಐಎಫ್‌ಎಸ್‌ಸಿ ಕೋಡ್: CNRB0001590 ಗೆ ಹಣವನ್ನು ಜಮೆ ಮಾಡಬಹುದು. ಮಾಹಿತಿಗಾಗಿ 8792559554 ಗೆ ಸಂಪರ್ಕಿಸಲು ಕೋರಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಯೋಗೇಶ್ ತಾಯಿ ನಾಗಮ್ಮ, ತಂದೆ ಮಂಜುನಾಥ್, ಪ್ರೀತಮ್ ಬಾಬು ಉಪಸ್ಥಿತರಿದ್ದರು.

## ಮಾರಣಾಂತಿಕ ಹಲ್ಲೆ ನಡೆಸಿದ ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ದಾವಣಗೆರೆ, ಮಾ.6- ಕೊಲೆ ಮಾಡುವ ಉದ್ದೇಶದಿಂದ ಮಾರಕಾಸ್ತ್ರಗಳಿಂದ ವ್ಯಕ್ತಿಯೊಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ನಾಲ್ವರಿಗೆ ಜೀವಾವಧಿ ಶಿಕ್ಷೆ ಮತ್ತು 44 ಸಾವಿರ ರೂ.ಗಳ ದಂಡವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ವಿಧಿಸಿದೆ.

ಪಿ. ಅಬ್ದುಲ್ ರೆಹಮಾನ್ ಎಂಬುವರು ಮಲೇಬೆನ್ನೂರು ಅಂಗಡಿಯಲ್ಲಿ ವಹಿವಾಟನ್ನು ಮುಗಿಸಿಕೊಂಡು ಬಸ್ ನಿಲ್ದಾಣಕ್ಕೆ ನಡೆದುಕೊಂಡು ಬರುವಾಗ ಗಂಗಾ ಪರಮೇಶ್ವರ ಶಾಲೆಯ ಹತ್ತಿರ ರಸ್ತೆಯಲ್ಲಿ ಹಿಂದಿನಿಂದ ಬಂದ ಆರೋಪಿತರುಗಳು ಮಾರಣಾಂತಿಕ ಹಲ್ಲೆ ನಡೆಸಿದ್ದರು.

ಈ ಸಂಬಂಧ 29.07.2015 ರಂದು ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪಿಎಸ್ಐ ದೇವರಾಜ್ ಟಿ.ವಿ. ತನಿಖೆ ಕೈಗೊಂಡು, ಆರೋಪಿತರಾದ ಮುಜಾವರ್ ಜಬೀವುಲ್ಲಾ, ಮುಜಾವರ್ ರೆಹಮಾನ್, ಮುಜಾವರ್ ಅಬ್ದುಲ್ಲಾ, ಮುಜಾವರ್ ಅಬ್ದುಲ್ ಅಜೀಜ್ ಇವರುಗಳ ವಿರುದ್ಧ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ. ಎನ್.ಹೆಗ್ಡೆಯವರು, ಇವರ ಮೇಲಿನ ಆರೋಪ ಸಾಬೀತಾಗಿದ್ದರಿಂದ ದಿನಾಂಕ 29-02-2024 ರಂದು ಆರೋಪಿತರಿಗೆ ಜೀವಾವಧಿ ಶಿಕ್ಷೆ ಹಾಗೂ 44,000/- ರೂ ದಂಡ ವಿಧಿಸಿದ್ದು, ಸದರಿ ಮೊತ್ತದಲ್ಲಿ ಸಂತ್ರಸ್ಥ ಅಬ್ದುಲ್ ರೆಹಮಾನ್ ಇವರಿಗೆ 25000/- ರೂ ಪರಿಹಾರ ಹಾಗೂ 19,000/- ರೂ.ಗಳನ್ನು ಸರ್ಕಾರಕ್ಕೆ ನೀಡುವಂತೆ ತೀರ್ಪು ನೀಡಿದ್ದಾರೆ. ಫಿರ್ಯಾದಿ ಪರವಾಗಿ ಸರ್ಕಾರಿ ವಕೀಲ ಮಂಜುನಾಥ್ ವಾದ ಮಂಡಿಸಿದ್ದರು.

## ಕಲ್ಯಾಣ ಮಂಟಪದಲ್ಲಿ ಕಳ್ಳತನ : ಬಂಧನ

ದಾವಣಗೆರೆ, ಮಾ.6- ಕಲ್ಯಾಣ ಮಂಟಪವೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು ಆತನಿಂದ 74 ಸಾವಿರ ರೂ. ಬೆಲೆಯ 13.45 ಗ್ರಾಂ. ತೂಕದ ಬಂಗಾರದ ಆಭರಣ ವಶಪಡಿಸಿಕೊಂಡಿದ್ದಾರೆ.

ಸ್ಥಳೀಯ ಸರಸ್ವತಿ ನಗರದ ಚಿದಾನಂದ ಎಂಬುವವರು ತಮ್ಮ ಸೋದರ ಸಂಬಂಧಿ ಮದುವೆಗೆಂದು ಬಾಪೂಜಿ ಬ್ಯಾಂಕ್ ಸಮುದಾಯ ಭವನಕ್ಕೆ ಬಂದಿದ್ದು, ಕೊಠಡಿಯೊಂದರಲ್ಲಿ ಬ್ಯಾಗುಗಳನ್ನು ಇಟ್ಟು ಮದುವೆ ಕಾರ್ಯದಲ್ಲಿ ಭಾಗಿಯಾಗಿದ್ದರು.

ಮದುವೆ ಮುಗಿದ ನಂತರ ಕೊಠಡಿಗೆ ಬಂದು ಪರಿಶೀಲಿಸಿದಾಗ ಬ್ಯಾಗ್‌ನಲ್ಲಿದ್ದ ಆಭರಣಗಳು ಕಳುವಾಗಿದ್ದವು. ಸಿಸಿಟಿವಿ ಪರಿಶೀಲಿಸಲಾಗಿ ವ್ಯಕ್ತಿಯೊಬ್ಬ ನಕಲಿ ಕೀ ಬಳಸಿ ಕೊಠಡಿ ತೆರೆದಿದ್ದು ಕಂಡು ಬಂದಿದೆ. ಈ ಕುರಿತು ಅವರು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡು ಪೊಲೀಸರು, ಶಾಂತಿ ನಗರದ ಮಸಾಲೆ ವ್ಯಾಪಾರಿ ಆರ್. ಕಿರಣ್ ನಾಯ್ಕ ಎಂಬುವವನನ್ನು ಬಂಧಿಸಿದ್ದಾರೆ.

ಬಂಧಿತ ವಿದ್ಯಾನಗರ ಠಾಣೆಯ ಮೂರು ಪ್ರಕರಣಗಳ ಸೇರಿದಂತೆ ಬಡಾವಣೆ ಪೊಲೀಸ್ ಠಾಣೆ, ಬಸವನಗರ ಠಾಣೆ ಹಾಗೂ ಇತರೆ ಕಡೆಯ ಪ್ರಕರಣಗಳಲ್ಲೂ ಭಾಗಿಯಾಗಿರುವುದು ತಿಳಿದು ಬಂದಿದೆ.

ಆರೋಪಿಯನ್ನು ಪತ್ತೆ ಮಾಡಿದ ನಗರ ಉಪವಿಭಾಗದ ಡಿವೈಎಸ್‌ಪಿ ಮಲ್ಲೇಶ್ ದೊಡ್ಡಮನಿ ಮಾರ್ಗದರ್ಶನದಲ್ಲಿ ವಿದ್ಯಾನಗರ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಭಾವತಿ.ಸಿ.ಶೇತಸನದಿ, ಪಿಎಸ್ಐ ವಿಜಯ್.ಎಂ., ವಿಶ್ವನಾಥ ಹೆಚ್.ಎಸ್ ಹಾಗೂ ಸಿಬ್ಬಂದಿಗಳಾದ ಆನಂದ ಮುಂದಲಮನಿ, ಮಲ್ಲಿಕಾರ್ಜುನ, ಭೋಜಪ್ಪ ಕಿಚಡಿ, ಮಂಜಪ್ಪ.ಟಿ, ಯೋಗೀಶ್ ನಾಯ್ಕ, ಗೋಪಿನಾಥ ಬಿ.ನಾಯ್ಕ, ಲಕ್ಷ್ಮಣ್ ಆರ್, ಮಂಜುನಾಥ ಬಿ.ವಿ ಅವರನ್ನು ಎಸ್ಪಿ ಉಮಾ ಪ್ರಶಾಂತ್ ಶ್ಲಾಘಿಸಿದ್ದಾರೆ.

## 9ಕ್ಕೆ ಗೃಹ ರಕ್ಷಕದಳ ನೇಮಕಾತಿ ದೈಹಿಕ ಪರೀಕ್ಷೆ

ದಾವಣಗೆರೆ, ಮಾ. 6- ದಾವಣಗೆರೆ ಜಿಲ್ಲಾ ಗೃಹ ರಕ್ಷಕ ದಳದಲ್ಲಿ ವಿವಿಧ ತಾಲ್ಲೂಕು ಮತ್ತು ಉಪ ಘಟಕಗಳಲ್ಲಿ ಖಾಲಿ ಇರುವ 69 ಗೃಹ ರಕ್ಷಕದಳ ನೇಮಕಾತಿಗೆ ದೈಹಿಕ ಪರೀಕ್ಷೆಯನ್ನು ಇದೇ ದಿನಾಂಕ 9 ರಂದು ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ (ಡಿ.ಎ.ಆರ್.) ನಡೆಯಲಿದೆ ಎಂದು ಪೊಲೀಸ್ ಅಧೀಕ್ಷಕರು ಹಾಗೂ ಗೃಹ ರಕ್ಷಕದಳ ಆಯ್ಕೆ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ.

## ಜಯಲಲಿತಾ ಆಭರಣ ಹಸ್ತಾಂತರಕ್ಕೆ ತಡೆ

**(1ನೇ ಪುಟದಿಂದ)** ಸರ್ಕಾರಕ್ಕೆ ಹಸ್ತಾಂತರಿಸುವಂತೆ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿತ್ತು. 27 ಕೆಜಿ ಬಂಗಾರ ಹಾಗೂ ವಜ್ರದ ಆಭರಣಗಳನ್ನು ಹಸ್ತಾಂತರಿಸಲು ತಿಳಿಸಲಾಗಿತ್ತು.



## ಹರಿಹರದಲ್ಲಿ ಪೋಲಿಯೋ ಲಸಿಕೆ ಜಾಥಾ

ಹರಿಹರ, ಮಾ.6- ನಗರದಲ್ಲಿ ಪಲ್ಸ್ ಪೋಲಿಯೋ ಲಸಿಕೆ ಜಾಥಾಕ್ಕೆ ಶಾಸಕ ಬಿ.ಪಿ.ಹರೀಶ್ ಚಾಲನೆ ನೀಡಿದರು. ಫಲ್ಸ್ ಪೋಲಿಯೋ ಜಾಥಾವು ನಗರಸಭೆಯ ಆವರಣದಿಂದ ಪ್ರಾರಂಭಗೊಂಡು ನಗರದ ಪ್ರಮುಖ ವೃತ್ತದಲ್ಲಿ ಸಂಚರಿಸಿ, ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಡೆಸುವ ಮೂಲಕ ಅಂತ್ಯಗೊಂಡಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಗುರುಬಸವರಾಜ್, ಪೌರಾಯುಕ್ತ ಐಗೂರು ಬಸವರಾಜ್, ಆರೋಗ್ಯ ಅಧಿಕಾರಿ ಪ್ರವೀಣ್, ನವೀನ್, ಡಾ. ವಿಶ್ವನಾಥ್, ಆರೋಗ್ಯ ಇಲಾಖೆಯ ರವಿಪ್ರಕಾಶ್, ಸಂತೋಷ ದಾದಾಪೀರ್, ಸುಧಾ ಸಳಕೆ ಇತರರು ಹಾಜರಿದ್ದರು.


**ಬೇಕಾಗಿದ್ದಾರೆ**
ಕನ್ನಡ ಭಾಷಾ ಜ್ಞಾನವಿರುವ ಅನುಭವಿ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
08192 254736

**ಮನೆಯ ರೀ ಪೇಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಹೊಸದ ರೀತಿಯಾಗಿ ನಿಮ್ಮ ಇಚ್ಛೆಗೆ ಅನುಗುಣವಾಗಿ ಉತ್ತಮವಾದ ಪೇಂಟ್ ಮಾಡಿ ಕೊಡಲಾಗುವುದು. ದರ ಕಡಿಮೆ ಉತ್ತಮ ಕೆಲಸಕ್ಕಾಗಿ ಸಂಪರ್ಕಿಸಿ :
72046 33302

**ನಾಟಿ ಕೋಳಿ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x57 ಪೂರ್ವ ಅಕ್ಕ-ಪಕ್ಕ, ಗೌಡರ ಜಯದೇವಪ್ಪ ಮನೆ ಸುತ್ತ-ಮುತ್ತ 30x50 ಪೂರ್ವ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸಪ್ಲೈಯರ್ಸ್ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ ಅಂಡ್ ರೆಸ್ಟೋರೆಂಟ್, ಹರಿಹರ. ಸಂಪರ್ಕಿಸಿ :
99726 98591
94490 37488

**ಬೇಕಾಗಿದ್ದಾರೆ**
ತಂದೂರಿ ರೋಟಿ ಮಾಡಲು ಹುಡುಗರು ಬೇಕಾಗಿದ್ದಾರೆ
ಸಂಪರ್ಕಿಸಿ :
99863 16672

**ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ.
99868 86464

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬಾಡಿಗೆಗೆ ಇದೆ**
ದಾವಣಗೆರೆ - ಚನ್ನಗಿರಿ ಹೈವೇ ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ರೈಸ್‌ಮಿಲ್ ಆವರಣದಲ್ಲಿ 84x88 ಅಳತೆಯ 64 ಹೆಚ್‌ಪಿ ಪವರ್ ಸಪ್ಲೈ ಇರುವ ಶೆಡ್ ಬಾಡಿಗೆ ಆಧಾರದ ಮೇಲೆ ಕೊಡಲಾಗುವುದು.
99451 59582

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 40x60 ಉತ್ತರ, 60 ಅಡಿ ರಸ್ತೆಗೆ ಹೊಂದಿಕೊಂಡು 30x50 ಉತ್ತರ, 30x50 ಪಶ್ಚಿಮ, 50x80 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
98441-33022

**ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್ ಕೆಲಸವನ್ನು ನಿರ್ವಹಿಸುತ್ತಾ ಅಂಗಡಿ ಕೆಲಸವನ್ನು ನಿರ್ವಹಿಸಬಲ್ಲ ಡ್ರೈವರ್ ಬೇಕಾಗಿದ್ದಾರೆ.
94480 38223

**2 BHK ಮನೆ ಬಾಡಿಗೆಗೆ**
ಇಂಡಿಪೆಂಡೆಂಟ್, ಗ್ರೌಂಡ್‌ಫ್ಲೋರ್, ಉತ್ತರಕ್ಕೆ ಬಾಗಿಲಿರುವ, # 2030/254, SS ಲೇಔಟ್, ಬಿ ಬ್ಲಾಕ್, 4ನೇ ಮೇನ್, 13ನೇ ಕ್ರಾಸ್ ಮನೆ, ದಾವಣಗೆರೆ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಸ್ಯಹಾರಿಗಳಿಗೆ ಮಾತ್ರ,
91084 37724

**ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ**
ಫ್ಯಾಷನ್ ವೇವ್ಸ್
ಫುಲ್ ಟೈಂ / ಪಾರ್ಟ್ ಟೈಂ
1 ರಿಂದ 2 ವರ್ಷ ಅನುಭವ ಇರುವವರು
2007/18, 2ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ಬಿಐಇಟಿ ಕಾಲೇಜ್ ಹತ್ತಿರ, ದಾವಣಗೆರೆ.
99725 09819

**WANTED**
Freshers for Auditor Office (Gents Only)
77607 40760

**2 BHK ಮಹಡಿ ಮನೆ ಬಾಡಿಗೆಗೆ ಇದೆ**
ಕೊಂಡಜ್ಜಿ ರಸ್ತೆ, ಅಶೋಕ ನಗರ, ಮೇನ್ ರೋಡ್, 5ನೇ ಕ್ರಾಸ್ ಬಲಭಾಗ, ದಾವಣಗೆರೆ. ಉತ್ತರಕ್ಕೆ ರಸ್ತೆ, ಮನೆ ಬಾಗಿಲು ಉತ್ತರಕ್ಕೆ ಇದೆ.
ಮೊ : 88841 67704

**ಮನೆ ಲೀಸ್‌ಗೆ ಇದೆ**
ವಿನೋಬ ನಗರ ಸಿದ್ದಿವಿನಾಯಕ ಸ್ಕೂಲ್ ಪಕ್ಕ, 3ನೇ ಮೇನ್, 9ನೇ ಕ್ರಾಸ್‌ನಲ್ಲಿ ಮನೆ ಲೀಜ್‌ಗೆ ಇದೆ.
ಸಂಪರ್ಕಿಸಿ.
74112 48978, 90603 20111

**ಪಿಗ್ಮಿ ಕಟ್ಟುವ ಮೂಲಕ ಸಾಲ ಪಡೆಯಿರಿ**
ಅಂಗಡಿ, ಹೋಟೆಲ್ ವ್ಯಾಪಾರಸ್ಥರು ಈ ಅವಕಾಶವನ್ನು ಪಡೆಯಬಹುದು. ನಿಮ್ಮ ಹೆಸರು, ವಿಳಾಸ SMS ಮಾಡಿ. ನಮ್ಮ ಏಜೆಂಟರನ್ನು ಸಂಪರ್ಕಿಸಿ.
94830 44965

**FACULTY REQUIRED**
Subject : Mathematics and Computer Science
Residential facility also available.
Contact : Samruddhi Coaching Academy Davanagere.
72045 99979

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

Use Summer Holidays Effectively
**Kids Summer Computer Education**
Learn Computer Basics, MS-Office & Internet
IATM Computers
2nd main, Akkamahadevi Samaja Complex, PJ Exten, 6th Cross, Ram & Co. Circle, Davangere.
Call for more Information
98867 63469, 90367 19573

**ಬೇಕಾಗಿದ್ದಾರೆ**
Pizza ಶಾಪ್‌ನಲ್ಲಿ ಕೆಲಸಕ್ಕೆ ಹುಡುಗಿ ಬೇಕಾಗಿದ್ದಾರೆ.
99860 00676

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**TUITIONS**
IGCSE, ICSE, CBSE and State Board from class 5th to 12th MCC A Block
98444 92888

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿನಾಂಕ 7.3.2024ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ರೂಮ್ ಬಾಡಿಗೆಗೆ ಇದೆ**
ಅಟ್ಯಾಚ್ ಬಾತ್ ರೂಮ್ ಇರುವ ರೂಮ್ 5ನೇ ಮೇನ್, ರಾಮ್ ಅಂಡ್ ಕೋ ಸರ್ಕಲ್ ಹತ್ತಿರ, 1ನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ
97431 50555

**ಸೈಟ್ ಮಾರಾಟಕ್ಕಿದೆ**
ಪೂರ್ವ ದಿಕ್ಕಿನ 65x65 ಅಳತೆಯ ಕಾರ್ನರ್ ಸೈಟ್ ರಶ್ಮಿ ಹಾಸ್ಟೆಲ್ ಹತ್ತಿರ, ಸೈಟ್ ಮಾರಾಟಕ್ಕಿದೆ.
63605 94165
95384 86666

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಸಂಪರ್ಕಿಸಿ.
80883 67539, 97390 63544

**ಕೆಲಸಕ್ಕೆ ಬೇಕಾಗಿದ್ದಾರೆ**
ನರ್ಸಿಂಗ್ ಕೆಲಸಕ್ಕೆ-01 (ಜಿ.ಎನ್.ಎಂ./ಎ.ಎನ್.ಎಂ)
ನೇರ ಸಂದರ್ಶನಕ್ಕೆ ಸಂಪರ್ಕಿಸಿ
86186 42929
08192-252228

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
ಕ್ಲರ್ಕ್ಸ್ ಇನ್
ಶಾಮನೂರು ರಸ್ತೆ, ದಾವಣಗೆರೆ.
70190 51306

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸೆಲ್ ಕಟ್ಟಲು ಹಾಗೂ ಇಡ್ಲಿ, ವಡ (ಅನುಭವ ಉಳ್ಳವರು) ಭಟ್ಟರು, ಅನುಭವವುಳ್ಳ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
70194 69302

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸೆನ್ಸ್ ಹಾಗೂ ದ್ವಿಚಕ್ರ ವಾಹನ ಹೊಂದಿರುವ ಕಾರ್ ಡ್ರೈವರ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
94486 56091
(ಮೇಲ್ಕಂಡ ನಂಬರಿಗೆ ಈ ಹಿಂದೆ ಕರೆ ಮಾಡಿದವರು ಪುನಃ ಮಾಡಬೇಡಿ)

**WANTED**
Any Degree with Computer knowledge is must. for Male & Female.
Contact : Exllent Electronics
#2137/1, 4th Main, 3rd Cross, MCC `A' Block, Davanagere - 577004
98865 15100

**CHANGE OF NAME**
I, Goudara Malleshappa Rajasekharappa (Old Name) R/o # 3366/1A, Shamanuru Road, Near HP Petrol Pump, Kuvempu Nagar, Davanagere-577004. I have changed my name as Mr. Goudara Malleshappa Rajasekhar (New Name) vide affidavit on 29-02-2024 sworn before Notary Prathaparudra Davangere. In future all my dealings & transactions will be in my new name.
Sd/-Goudara Malleshappa Rajasekhar

**CHANGE OF NAME**
I, Katyayani Rajasekharappa (Old Name) R/o # 3366/1A, Shamanuru Road, Near HP Petrol Pump, Kuvempu Nagar, Davanagere-577004. I have changed my name as Mrs. Katyayani Rajashekhar (New Name) vide affidavit on 29-02-2024 sworn before Notary Prathaparudra Davangere. In future all my dealings & transactions will be in my new name.
Sd/- Mrs. Katyayani Rajashekhar

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**REQUIRED**
FIELD SALES EXECUTIVES
for Leading e-Commerce Company
Indiamart Intermesh Limited
For Davangere Location.
(Fresher's/Experienced)
Age : below 32 yrs.,
Any Graduate/Diploma.
Salary : 15 k to 18 k + Incentive.
Send your CV/whatsapp Location: Davangere.
AFROZ - 97401 06740
JIBRAN - 99015 71166
80730 50877

**ROOM FOR RENT**
# 3425/22, 4th main, 11th Cross, SS Layout `B' Block, 3rd Floor ನಲ್ಲಿರುವ Kitchen Platform, Attached Toilet Bathroom ಬಾಡಿಗೆಗೆ ಇದೆ.
96638 28202, 96320 60242

**WANTED**
PUC / Any degree / Diploma / (Pass or Fail) with Computer Knowledge is must for male & female. Contact : Excellent Electronics, # 2137/1, 4th main, 3rd Cross, MCC `A' Block (Near Guru Searching Centre) Davanagere - 577004.
98865 15100

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟುಗಳು ಮಾರಾಟಕ್ಕಿವೆ**
40x60 MB ಸಿಟಿ ಪೂರ್ವ 40x60 ಸುಬ್ರಹ್ಮಣ್ಯ ನಗರ, 50x60 ವಿನಾಯಕ ಬಡಾವಣೆ ದಕ್ಷಿಣ, ಎಸ್.ಎಸ್. ಹಾಸ್ಪಿಟಲ್‌ಗೆ ಹತ್ತಿರ ಪಶ್ಚಿಮ 30x40 ಡಾಲರ್ಸ್ ಕಾಲೋನಿ ಉತ್ತರ. ಹೊಲಗದ್ದೆ & ತೋಟಗಳು ಕೊಡುವ, ಕೊಳ್ಳುವುದಿದ್ದರೆ ವಿಚಾರಿಸಿ :
99727 00107

**ಭೂಮಾಪಕರ ಹುದ್ದೆಗಳ ನೇಮಕಾತಿ**
ಪರೀಕ್ಷೆಗೆ ತರಬೇತಿ ನೀಡಲಾಗುವುದು ಹಾಗೂ 8 ರಿಂದ 10ನೇ ತರಗತಿಗಳಿಗೆ Maths, Science ಟ್ಯೂಷನ್ ಮಾಡಲಾಗುವುದು. Home Tuitions also available (10 ಜನರಿಗೆ ಮಾತ್ರ ಒಂದು ಬ್ಯಾಚಿನಲ್ಲಿ ಅವಕಾಶ.
96631 59162, 70905 42089

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

# ಮಲೆಕುಂಬಳೂರಿನ ಆಂಜನೇಯ ಬ್ರಹ್ಮರಥೋತ್ಸವ



ಹೊನ್ನಾಳಿ, ಮಾ. 6 - ತಾಲ್ಲೂಕಿನ ಮಲೆಕುಂಬಳೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮರಥೋತ್ಸವ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥವನ್ನು ಬಣ್ಣ, ಬಣ್ಣದ ಬಾವುಟಗಳು, ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು. ಶ್ರೀ ಆಂಜನೇಯ ಸ್ವಾಮಿ ಉತ್ಸವ ಮೂರ್ತಿಯ ರಥ ಎಳೆಯಲಾಯಿತು. ಸಹಸ್ರಾರು ಭಕ್ತರು ಶ್ರೀ ಆಂಜನೇಯ ಸ್ವಾಮಿಗೆ ಜಯಘೋಷ ಹಾಕುತ್ತಾ ತೇರು ಎಳೆದು ಭಕ್ತಿ ಸಮರ್ಪಿಸಿದರು. ರಥಕ್ಕೆ ಬಾಳೆಹಣ್ಣು, ಕಾಳುಮೆಣಸು ಮತ್ತಿತರೆ ವಸ್ತುಗಳನ್ನು ಭಕ್ತರು ಸಮರ್ಪಿಸಿದರು. ರಥದ ಗಾಲಿಗಳಿಗೆ ತೆಂಗಿನ ಕಾಯಿ ಒಡೆದು, ಬಾಳೆಹಣ್ಣು ನೈವೇದ್ಯ ಮಾಡಿದರು.

ಮಲೆಕುಂಬಳೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಯ ಮುಖಂಡ ಕೆ.ಬಿ. ರಾಜಶೇಖರಪ್ಪ, ಕೆ.ಆರ್. ವರದರಾಜಪ್ಪ, ಟಿ.ಎಸ್. ಕೃಷ್ಣಪ್ಪ, ಬಿ.ಎಚ್. ವಾಗೀಶ್, ಜಿ.ಇ. ಸುಧಾಕರ್, ಮಾರುತಿ, ಜಿ. ಆರ್. ಪ್ರಕಾಶ್ ಇತರರು ಪಾಲ್ಗೊಂಡಿದ್ದರು.

**ಶ್ರೀ ಆಂಜನೇಯ ಸ್ವಾಮಿ ಮುಳ್ಳೋತ್ಸವ:** ಇಂದು ಓಕುಳಿ, ಭೂತನ ಸೇವೆ ಹಾಗೂ ಕಂಕಣ ವಿಸರ್ಜನೆ ಕಾರ್ಯಕ್ರಮಗಳು ನಡೆಯಲಿವೆ.

# ಭಾರತ ದೇಶಕ್ಕೆ ಜ್ಞಾನಿಗಳು, ಹೃದಯವಂತರು ಅಗತ್ಯ



ದಾವಣಗೆರೆ, ಮಾ. 6- ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಭಾರತ ದೇಶಕ್ಕೆ ಬುದ್ಧಿವಂತರ ಜೊತೆಗೆ ಜ್ಞಾನಿಗಳು, ಹೃದಯವಂತರ ಅಗತ್ಯತೆ ಇದೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ್ ಹೇಳಿದರು.

ನಗರದ ಡಯಟ್ ಸಭಾಂಗಣದಲ್ಲಿ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ವತಿಯಿಂದ ಇಂದು ಏರ್ಪಡಿಸಿದ್ದ ಚಿತ್ರಕಲಾ ಪ್ರದರ್ಶನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿದರೆ ಮಕ್ಕಳು ಬುದ್ಧಿವಂತರಾಗುವ ಜೊತೆಗೆ ಜ್ಞಾನವಂತರಾದರೆ ಹೃದಯವಂತರಾಗುತ್ತಾರೆಂದರು.

ಅತಿ ಬುದ್ಧಿವಂತಿಕೆ ದೇಶಕ್ಕೆ ಮಾರಕ. ಬುದ್ದಿವಂತಿಕೆ ಜೊತೆ ಜ್ಞಾನಿಗಳಾದರೆ ದೇಶಕ್ಕೆ ಪ್ರೇರಕರಾಗಿ ಏನನ್ನಾದರೂ ಕೊಡುಗೆ ನೀಡ ಬಲ್ಲರು. ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನ ಮಾತ್ರವಲ್ಲದೇ ಸರ್ವತೋಮುಖ ಬೆಳವಣಿಗೆ ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಡಯಟ್ ನಿವೃತ್ತ ಉಪ ನಿರ್ದೇಶಕ ಹೆಚ್.ಕೆ. ಲಿಂಗರಾಜ್ ಮಾತನಾಡಿ, ಮಕ್ಕಳಿಗೆ ಗುಣಮಟ್ಟದ, ಆಳವಾದ ಶಿಕ್ಷಣ ನೀಡಿದಾಗ ಸುಸಂಸ್ಕೃತ, ಸೃಜನಶೀಲ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಮಕ್ಕಳಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡಿಸುವ ಅಗತ್ಯವಿದೆ. ತಾಯಿ ಬೇರುಗಳು ಗಟ್ಟಿಯಾದಷ್ಟು ಮರಗಳು ಹೆಮ್ಮರವಾಗಿ ಬೆಳೆಯುತ್ತವೆ. ಕಾರಣ ಮಕ್ಕಳಿಗೆ ಆಳವಾದ ಜ್ಞಾನ ನೀಡಬೇಕೆಂದು ಸಲಹೆ ನೀಡಿದರು.

ಮಕ್ಕಳು ಗುರುಗಳಿಗಿಂತ ಹೆಚ್ಚು ಬುದ್ಧಿವಂತಿಕೆ ಪ್ರದರ್ಶಿಸಿರುವ ಉದಾಹರಣೆಗಳು ಸಹ ಇವೆ. ಚಿತ್ರಕಲೆ ಆರಾಧಿಸುವವರಿಗೆ, ರೂಢಿಸಿಕೊಳ್ಳುವವರಿಗೆ ಪ್ರಪಂಚದಲ್ಲಿ ಸಾಧನೆ ಸಾಧ್ಯ ಎಂಬುದನ್ನು ಚಿತ್ರಕಲಾ ಶಿಕ್ಷಕರು ತೋರಿಸಿಕೊಟ್ಟಿದ್ದಾರೆ. ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರ ಹಾಕಲು ಅವಕಾಶ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಕರು ಸೂಕ್ತ ಮಾರ್ಗದರ್ಶನ ಮಾಡಬೇಕಾಗಿದೆ ಎಂದರು.

ಡಯಟ್ ಪ್ರಾಚಾರ್ಯರಾದ ಎಸ್. ಗೀತಾ ಅಧ್ಯಕ್ಷತೆ ವಹಿಸಿದ್ದರು. ಚಿತ್ರಕಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಪಿ. ನಾಗರಾಜ್, ಸಿದ್ದೇಶಪ್ಪ ಜಿಗಣಪ್ಪರ, ಶ್ರೀನಿವಾಸಮೂರ್ತಿ, ನಾಗಭೂಷಣ, ಎ. ಮಹಾಲಿಂಗಪ್ಪ, ಶಾಂತಯ್ಯ ಪರಡಿಮಠ, ಸಿ. ನಾಗರಾಜ್, ಎಂ. ಹನುಮಂತಪ್ಪ ಮತ್ತಿತರರು ಭಾಗವಹಿಸಿದ್ದರು.

## ಕಾನೂನು ಕಾಲೇಜಿನ ಸುವರ್ಣ ಮಹೋತ್ಸವ ಕಟ್ಟಡ ಉದ್ಘಾಟನೆ

**ನಗರದಲ್ಲಿ ಇಂದು**

ದಾವಣಗೆರೆ, ಮಾ.6- ರಾಜನಹಳ್ಳಿ ಲಕ್ಷ್ಮಣ ಶೆಟ್ಟಿ ಕಾನೂನು ಮಹಾವಿದ್ಯಾಲಯದ ಸುವರ್ಣ ಮಹೋತ್ಸವ ಕಟ್ಟಡ ಉದ್ಘಾಟನಾ ಸಮಾರಂಭ ನಾಳೆ 7ರಂದು ನಡೆಯಲಿದೆ ಎಂದು ಆರ್.ಎಲ್. ಕಾನೂನು ಕಾಲೇಜು ಪ್ರಾಂಶುಪಾಲ ಡಾ.ಜಿ. ಎಸ್. ಯತೀಶ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಡಾ.ಶಿವರಾಜ ವಿ.ಪಾಟೀಲ್ ಅವರು ಮಧ್ಯಾಹ್ನ 2.30ಕ್ಕೆ ಸಮಾರಂಭ ಉದ್ಘಾಟಿಸಲಿದ್ದಾರೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಾಲೇಜಿನ ಆಡಳಿತ ಸಮಿತಿ ಅಧ್ಯಕ್ಷ ಡಾ.ಆರ್.ಎಲ್. ಉಮಾಶಂಕರ್, ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

1968ರಲ್ಲಿ ಆರಂಭವಾಗಿ 50 ವರ್ಷ ಪೂರೈಸಿದೆ. ಇದರ ಸವಿನೆನಪಿಗಾಗಿ ಹಾಗೂ ಕಾನೂನು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇರುವುದನ್ನು ಮನಗಂಡು ಶಾಮನೂರು ಶಿವಶಂಕರಪ್ಪ ಹಾಗೂ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಹೆಚ್ಚುವರಿ ತರಗತಿಗಳನ್ನು ಪ್ರಾರಂಭಿಸಲು 1.50 ಕೋಟಿ ರೂ. ವೆಚ್ಚದ 6 ಕೊಠಡಿಗಳ ಹೊಸ ಕಟ್ಟಡ ನಿರ್ಮಿಸಿರುವುದಾಗಿ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಕಾಲೇಜಿನ ನಿಕಟಪೂರ್ವ ಪ್ರಾಂಶುಪಾಲ ಡಾ.ಸೋಮಶೇಖರ್, ಬಿ.ಪಿ. ಬಸವನಗೌಡ, ಲಿಂಗರಾಜ್ ಉಪಸ್ಥಿತರಿದ್ದರು.

# ಮಹಿಳಾ ಸ್ವಾವಲಂಬನೆಯತ್ತ ನರೇಂದ್ರ ಮೋದಿ ಚಿತ್ತ

ದಾವಣಗೆರೆ, ಮಾ. 6- ದೇಶದ ಎಲ್ಲಾ ವರ್ಗದ ಜನರನ್ನು ಸ್ವಾಭಿಮಾನಿ ಯನ್ನಾಗಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಗರ್ಭದಲ್ಲಿರುವ ಶಿಶುವಿನಿಂದ ಹಿಡಿದು ವಯೋವೃದ್ಧರಿಗೆ ಅನೇಕ ಉಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದ್ದಾರೆ. ಈ ಪೈಕಿ ನಾರಿಶಕ್ತಿ ವಂದನಾ ಕಾರ್ಯಕ್ರಮ ಅತ್ಯುತ್ತಮವಾದುದು ಎಂದು ಉತ್ತರ ಕನ್ನಡ ಜಿಲ್ಲಾ ಪ್ರಭಾರಿ ಹಾಗೂ ಕಾರ್ಯಕ್ರಮದ ಉಸ್ತುವಾರಿ ಭಾರತಿ ಜಂಬಗಿ ಹೇಳಿದರು.

ನಗರದ ಕೆ.ಬಿ.ಬಡಾವಣೆಯ ಜಿಲ್ಲಾ ಬಿಜೆಪಿ ಕಚೇರಿಯಿಂದ ಪ್ರಾರಂಭವಾದ 'ನಮ್ಮ ನಡಿಗೆ ಮೋದಿ ಕಡೆಗೆ' ಎಂಬ ನಾರಿ ವಂದನಾ ಮ್ಯಾರಥಾನ್ (ಪಾದಯಾತ್ರೆ) ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಮೋದಿ ಅವರು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಇದರ ಭಾಗವಾಗಿ ದಾವಣಗೆರೆ ಜಿಲ್ಲಾ ಮಹಿಳಾ ಮೋರ್ಚಾದಿಂದ ಮೂರನೇ ದಿನದ 'ನಾರಿ ಶಕ್ತಿ ವಂದನಾ' ಜಾಥಾ ನಡೆಸಲಾಯಿತು ಎಂದರು.

ದೇಶಾದ್ಯಂತ ನಡೆಯುತ್ತಿರುವ ಸಮೀಕ್ಷೆಯಲ್ಲಿ ಮೋದಿಯವರ ಪರ ಉತ್ತಮ ಸ್ಪಂದನೆ ದೊರೆತಿದೆ.



ಈ ನಿಟ್ಟಿನಲ್ಲಿ ಬರುವ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರು ಮೋದಿ ಅವರ ಬೆಂಬಲಕ್ಕೆ ನಿಲ್ಲಬೇಕಾಗಿದೆ ಎಂದು ಕರೆ ನೀಡಿದರು.

ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ ವಾಲಿ ಮಾತನಾಡಿ, ನಮ್ಮ ನಡಿಗೆ ಮೋದಿ ಕಡೆಗೆ ಎನ್ನುವ ಘೋಷ ವಾಕ್ಯದೊಂದಿಗೆ ಮಾತೃ ಹೃದಯದ ನರೇಂದ್ರ ಮೋದಿಯವರ ಕೈ ಬಲಪಡಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಪದಾಧಿಕಾರಿಗಳಾದ ಭಾಗ್ಯ ಪಿಸಾಳೆ, ಸಾವಿತ್ರಮ್ಮ, ರೇಣುಕಮ್ಮ ಬಣಕಾರ್, ಚಂದ್ರಕಲಾ, ಜಯಲಕ್ಷ್ಮಿ, ಧರ್ಮಿಬಾಯಿ, ಸವಿತಾ, ಮಂಜುಳಾ, ರೇಣುಕಾ ಕೃಷ್ಣ, ನೀತಾ, ಸಾವಿತ್ರಿ, ಯಲ್ಲಮ್ಮ, ಕುಸುಮ ಮತ್ತಿತರರು ಭಾಗವಹಿಸಿದ್ದರು.

# ಪ್ರಧಾನಿ ವಿರುದ್ಧ ಪನೌತಿ ಪದ

**ಸಾರ್ವಜನಿಕ ಭಾಷಣದಲ್ಲಿ ರಾಹುಲ್ ಎಚ್ಚರ ವಹಿಸಲಿ ಎಂದ ಆಯೋಗ**

ನವದೆಹಲಿ, ಮಾ. 6- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ 'ಪನೌತಿ' (ಅಪಶಕುನ) ಹಾಗೂ ಪಿಕ್‌ಪಾಕೆಟ್ ಟೀಕೆ ಮಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮುಂದಿನ ದಿನಗಳಲ್ಲಿ ಸಾರ್ವಜನಿಕ ಭಾಷಣ ಮಾಡುವಾಗ ಎಚ್ಚರವಾಗಿರಬೇಕು ಎಂದು ಚುನಾವಣಾ ಆಯೋಗ ತಿಳಿಸಿದೆ. ತಾರಾ ಪ್ರಚಾರಕರು ಹಾಗೂ ರಾಜಕೀಯ ನಾಯಕರಿಗೆ ಸಂಬಂಧಿಸಿದಂತೆ ಇತ್ತೀಚೆಗೆ ನೀಡಲಾಗಿರುವ ಸಲಹೆಗಳನ್ನು ಚುನಾವಣಾ ಅಭಿಯಾನದ ವೇಳೆ ಪಾಲಿಸಬೇಕು ಎಂದೂ ಆಯೋಗ ತಿಳಿಸಿದೆ.

ಕಳೆದ ವರ್ಷ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ ವಿರುದ್ಧ ಪನೌತಿ ಹಾಗೂ ಪಿಕ್‌ಪಾಕೆಟ್ ಎಂಬ ಶಬ್ದಗಳನ್ನು ಬಳಸಿದ್ದರು. ಈ ಹೇಳಿಕೆ ಪ್ರಶ್ನಿಸಿ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ರಾಹುಲ್ ಗಾಂಧಿ ಹೇಳಿಕೆ ಕೆಟ್ಟ ಅಭಿರುಚಿಯದ್ದಾಗಿದೆ ಎಂದು ಹೇಳಿದ್ದ ಹೈಕೋರ್ಟ್, ಈ ಬಗ್ಗೆ ಪರಿಶೀಲಿಸುವಂತೆ ಚುನಾವಣಾ ಆಯೋಗಕ್ಕೆ ತಿಳಿಸಿತ್ತು.

(2ನೇ ಪುಟಕ್ಕೆ)

ಈ ಬಗ್ಗೆ ಪರಿಶೀಲಿಸಿರುವ ಚುನಾವಣಾ ಆಯೋಗ, ಮುಂದಿನ ದಿನಗಳಲ್ಲಿ ರಾಹುಲ್ ಗಾಂಧಿ ಸಾರ್ವಜನಿಕ ಭಾಷಣದ ವೇಳೆ ಹೆಚ್ಚು ಎಚ್ಚರಿಕೆ ವಹಿಸುವಂತೆ ಸಲಹೆ ನೀಡಿದೆ ಎಂದು ಮೂಲಗಳು ಹೇಳಿವೆ.

## ನಾಳೆ ಶಂಭುಲಿಂಗೇಶ್ವರ ದೇಗುಲದಲ್ಲಿ ರುದ್ರಾಭಿಷೇಕ, ಪಂಚಾಮೃತಾಭಿಷೇಕ

ದಾವಣಗೆರೆ, ಮಾ. 6- ಇಲ್ಲಿನ ವಿನೋಬನಗರ ಮೊದಲನೇ ಮುಖ್ಯರಸ್ತೆ, ಎರಡನೇ ಅಡ್ಡರಸ್ತೆಯಲ್ಲಿರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 8 ರಂದು ಶುಕ್ರವಾರ ಬೆಳಗಿನ ಜಾವ 4.30 ರಿಂದ ಶಂಭುಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ ಜರುಗಲಿವೆ. ಸಂಜೆ 4.30 ರಿಂದ ತಡರಾತ್ರಿಯವರೆಗೆ ಶ್ರೀ ಸ್ವಾಮಿಯ ದಿವ್ಯ ದರ್ಶನವಿರುತ್ತದೆ.

## ಬಿಜೆಪಿ, ಬಿಜೆಡಿ ಮೈತ್ರಿ ಸಾಧ್ಯತೆ

ಭುವನೇಶ್ವರ್, ಮಾ. 6 – ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಒಡಿಶಾದ ಆಡಳಿತಾರೂಢ ಬಿ.ಜೆ.ಡಿ. ಹಾಗೂ ಪ್ರತಿಪಕ್ಷವಾದ ಬಿ.ಜೆ.ಪಿ.ಗಳು ಮೈತ್ರಿ ಮಾಡಿಕೊಳ್ಳುವ ಸಾಧ್ಯತೆ ಇದೆ. ಬಿ.ಜೆ.ಡಿ. ನಾಯಕರು ಮುಖ್ಯಮಂತ್ರಿ ನವೀನ್ ಪಾಟ್ನಾಯಕ್ ನಿವಾಸದಲ್ಲಿ ಸುದೀರ್ಘ ಸಭೆ ನಡೆಸಿದ್ದಾರೆ. ಬಿಜೆಪಿ ನಾಯಕರೂ ಸಹ ರಾಜಧಾನಿಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸಿದ್ದಾರೆ. ಮೈತ್ರಿ ಕುರಿತು ಚರ್ಚಿಸಲಾಗುತ್ತಿದೆ ಎಂದು ಬಿ.ಜೆ.ಡಿ. ಉಪಾಧ್ಯಕ್ಷ ಹಾಗೂ ಶಾಸಕ ದೇಬಿ ಪ್ರಸಾದ್ ಮಿಶ್ರ ಖಚಿತ ಪಡಿಸಿದ್ದಾರೆ.


WANTED

SENIOR OFFICE EXECUTIVE-1 (MALE)

(B.COM/ M.COM / M.B.A)

HAVING EXPERIENCE IN BANKING.

Age Limit : Below 35 years

Please send your resume to: karavalidvg@yahoo.com or

KARAVALI SOUHARDA CR. CO-OP SOCIETY LTD.,

Kundwada Road, Near Buntara Bhavana, Davangere-577006.

Contact No : 9900870019, 9844111334


## ಅನಿಲ ಸೋರಿಕೆ : ಹರಿಹರದಲ್ಲಿ ಇಂದು ಅಣಕು ಪ್ರದರ್ಶನ

ಕುಮಾರ ಪಟ್ಟಣ್ಣಂನ ಗ್ರಾಸಿಂ ಕಾರ್ಖಾನೆಯ ವತಿಯಿಂದ ಸಾರ್ವಜನಿಕರಿಗೆ ಅನಿಲ ಸೋರಿಕೆಯ ಬಗ್ಗೆ ಅಣಕು ಪ್ರದರ್ಶನವನ್ನು ಇಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಖಾನೆಯ ಕಾರ್ಯಕ್ರಮ ಸಂಯೋಜಕ ರಮೇಶ್ ತಿಳಿಸಿದ್ದಾರೆ. ಅಣುಕು ಪ್ರದರ್ಶನವನ್ನು ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅನಿಶ್ ಕುಮಾರ್ ಚಾಲನೆ ನೀಡಲಿದ್ದಾರೆ. ಗ್ರಾಸಿಂ ಕಾರ್ಖಾನೆ ಮುಖ್ಯಸ್ಥ ಅಜಯ ಗುಪ್ತ ಮತ್ತು ಇತರರು ಉಪಸ್ಥಿತರಿರುವರು.

## ನಗರದಲ್ಲಿಂದು ದಿಂಡಿ ಉತ್ಸವ

ವಸಂತ ರಸ್ತೆಯಲ್ಲಿರುವ ಶ್ರೀ ವಿಠೋಬ ದೇವರ ದಿಂಡಿ ಉತ್ಸವದ ಧಾರ್ಮಿಕ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 5 ಗಂಟೆಯಿಂದ ಕಾಕಡಾರತಿ ಆದ ನಂತರ ಬೆಳಿಗ್ಗೆ 9 ಗಂಟೆಗೆ ದಿಂಡಿ ಉತ್ಸವ, ಪ್ರಮುಖ ರಾಜಬೀದಿಗಳಲ್ಲಿ ನಗರ ಪ್ರದಕ್ಷಿಣೆ ಹೊರಡುವುದು, ಉತ್ಸವ ವಾಪಸ್ ಬಂದ ನಂತರ ಸಂತ ಪೂಜಾ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮಧ್ಯಾಹ್ನ 1 ಗಂಟೆಗೆ ವಸಂತ ರಸ್ತೆಯಲ್ಲಿರುವ ಶ್ರೀ ವಿಠ್ಠಲ ದೇವಸ್ಥಾನದ ಶ್ರೀಮತಿ ಅಂಬಾಬಾಯಿ ನವಲೆ ಬಸವಣ್ಣಪ್ಪ ಕಲ್ಯಾಣ ಮಂಟಪದಲ್ಲಿ ಶ್ರೀ ಸಂತ ಸಮಾರಾಧನೆ ನಡೆಯಲಿದೆ.

## ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಶಿವರಾತ್ರಿ ಪೂಜೆ



ದಾವಣಗೆರೆ,ಮಾ.6- ನಗರದ ಅಶೋಕ ಚಿತ್ರಮದಿರದ ಬಳಿ ಇರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 8ರ ಶುಕ್ರವಾರ ಮಹಾಶಿವರಾತ್ರಿ ಪ್ರಯುಕ್ತ ಶ್ರೀ ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮತ್ತು ಪೂಜೆಗಳು ಏರ್ಪಾಡಾಗಿವೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

# ಎಫ್.ಎಸ್.ಎಲ್. ವರದಿ ಬಿಡುಗಡೆಗೆ ಒತ್ತಾಯ



ಸಿ.ಟಿ.ರವಿ

ಬೆಂಗಳೂರು, ಮಾ. 6 - ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದ ಮೂವರನ್ನು ಸರ್ಕಾರ ಬಂಧಿಸಿದೆಯಾದರೂ, ಎಫ್‌ಎಸ್‌ಎಲ್ ವರದಿಯನ್ನು ಏಕೆ ಬಿಡುಗಡೆ ಮಾಡಿಲ್ಲ? ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಧಿತರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ತಬ್ಬಿಕೊಂಡಿರುವ ಫೋಟೋಗಳು ಸುದ್ದಿ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ದೇಶದ್ರೋಹಿಗಳಿಗೂ ಕಾಂಗ್ರೆಸ್ ನಾಯಕರಿಗೂ ಅಪ್ಪುಗೆಯ ನಂಟಿದೆ ಎಂದು ನಮಗೆ ತಿಳಿದಿರಲಿಲ್ಲ ಎಂದರು.

'ಪಾಕಿಸ್ತಾನ ಜಿಂದಾಬಾದ್' ನಂಟು ಅಂದುಕೊಂಡಿದ್ದಕ್ಕಿಂತ ಹೆಚ್ಚಾಗಿಯೇ ಇದೆ. ಕೂಡಲೇ ಎಫ್‌ಎಸ್‌ಎಲ್ ವರದಿ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಘಟನೆ ನಡೆದ ಮರುದಿನವೇ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿ 'ಅವರು ಹಾಗೆ ಕೂಗಿಲ್ಲ, ಪಾಕಿಸ್ತಾನ ಜಿಂದಾಬಾದ್ ಎಂದು ಇಲ್ಲವೇ ಇಲ್ಲ' ಎಂದಿದ್ದರು. ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯದ ಒಬ್ಬೊಬ್ಬ ಸಚಿವರು ಒಂದೊಂದು ರೀತಿ ಹೇಳಿಕೆ ಕೊಡುತ್ತಿದ್ದಾರೆ. ಕೆಲವರು ಬಾಂಬ್ ಇಟ್ಟವರು ಬಿಜೆಪಿಯವರೇ ಇರಬಹುದು ಎಂದಿದ್ದಾರೆ.

2000 ಇಸವಿಯಲ್ಲಿ ಚರ್ಚ್‌ಗಳ ಮೇಲೆ ಬಾಂಬ್ ಸ್ಫೋಟ ಪ್ರಕರಣ ನಡೆದಾಗ, ಅಂದಿನ ಗೃಹ ಸಚಿವ, ಈಗಿನ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ತನಿಖೆಗೆ ಮುಂಚೆಯೇ 'ಘಟನೆ ಹಿಂದೆ ಆರೆಸ್ಸೆಸ್ ಪಿತೂರಿ ಇದೆ' ಎಂದು ಫರ್ಮಾನು ಹೊರಡಿಸಿ, ಸಾರ್ವಜನಿಕ ಹೇಳಿಕೆಯನ್ನೂ ನೀಡಿದ್ದರು. ತನಿಖೆ ನಂತರ, ಪಾಕಿಸ್ತಾನ ಪ್ರೇರಿತ ಭಯೋತ್ಪಾದಕ ಸಂಘಟನೆ ಚರ್ಚ್‌ಗಳಿಗೆ ಬಾಂಬ್ ಇಟ್ಟಿದ್ದರು ಎಂಬುದು ಬೆಳಕಿಗೆ ಬಂತು, ಅಂದು ಫ್ಲೈಓವರ್‌ನಲ್ಲಿ ಬಾಂಬ್ ಒಯ್ಯುವಾಗ ಸ್ಫೋಟ ಸಂಭವಿಸಿ ಭಯೋತ್ಪಾದಕನೂ ಸತ್ತಿದ್ದ, ಭಯೋತ್ಪಾದನಾ ಜಾಲವೂ ಹೊರಗಡೆ ಬಂದಿತ್ತು ಎಂದು ರವಿ ನೆನಪಿಸಿದರು.

ಕಾಂಗ್ರೆಸ್ ಸಚಿವರು ಭಯೋತ್ಪಾದಕರನ್ನು ರಕ್ಷಿಸುವ ರೀತಿಯಲ್ಲಿ ಹೇಳಿಕೆ ಕೊಡುತ್ತಿದ್ದಾರೆ. ಪ್ರಕರಣದ ತನಿಖೆಗೆ ಮೊದಲೇ ವಿಷಯಾಂತರ ಮಾಡುವ, ದಿಕ್ಕು ತಪ್ಪಿಸುವ ಕೆಲಸವನ್ನು ಕರ್ನಾಟಕದ ಕಾಂಗ್ರೆಸ್ ಸಚಿವರು ಮಾಡುತ್ತಿರುವುದು, ಯಾರನ್ನೋ ರಕ್ಷಿಸುವ ಉದ್ದೇಶ ಹೊಂದಿದ್ದಾರೆ ಎಂಬ ಅನುಮಾನಕ್ಕೆ ಕಾರಣವಾಗಿದೆ ಎಂದರು.

# ನಗರದ ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಇಂದು

ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಇಂದು ಸಂಜೆ 4 ಗಂಟೆಗೆ ಆಸ್ಪತ್ರೆಯಲ್ಲಿ ನವೀಕರಣಗೊಂಡ ಅತ್ಯಾಧುನಿಕ ಶಸ್ತ್ರ ಚಿಕಿತ್ಸಾ ಕೇಂದ್ರ, ನವಜಾತ ಶಿಶುಗಳ ಆರೈಕೆ ಕೇಂದ್ರ ಮತ್ತು ಎದೆ ಹಾಲಿನ ಭಂಡಾರದ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಹಿರಿಯ ಶಾಸಕರೂ ಆದ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ ಆಗಮಿಸುವರು. ಬಾಪೂಜಿ ಮಕ್ಕಳ ಆಸ್ಪತ್ರೆ, ಮತ್ತು ಸಂಶೋಧನಾ ಕೇಂದ್ರದ ಛೇರ್ಮನ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಎ. ಎಸ್.ವೀರಣ್ಣ, ಎ.ಎಸ್.ನಿರಂಜನ್, ಶ್ರೀಮತಿ ಕಿರುವಾಡಿ ಗಿರಿಜಮ್ಮ, ಸಂಪನ್ನ ಮುತಾಲಿಕ್ ಆಗಮಿಸಲಿದ್ದಾರೆ ಎಂದು ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಜಿ.ಗುರುಪ್ರಸಾದ್ ತಿಳಿಸಿದ್ದಾರೆ.

## ನಗರದ ಇಂದು ವಿಶ್ವ ಸಾಮಾಜಿಕ ನ್ಯಾಯ ದಿನ

ದೇವರಾಜ ಅರಸು ಬಡಾವಣೆಯ ವಿಕಲಾಂಗ ವ್ಯಕ್ತಿಗಳ ಕೌಶಲ್ಯ ಅಭಿವೃದ್ಧಿ, ಪುನರ್ವಸತಿ ಮತ್ತು ಸಬಲೀಕರಣಕ್ಕಾಗಿ ಸಂಯೋಜಿತ ಪ್ರಾದೇಶಿಕ ಕೇಂದ್ರದಲ್ಲಿ ವಿಶ್ವ ಸಾಮಾಜಿಕ ನ್ಯಾಯ ದಿನದ ಅಂಗವಾಗಿ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು, ಆರೈಕೆ ನೀಡುವವರು ಮತ್ತು ವಿದ್ಯಾರ್ಥಿಗಳಿಗಾಗಿ ಇಂದು ಬೆಳಿಗ್ಗೆ 11.30ಕ್ಕೆ ಜಾಗೃತಿ ಆಯೋಜಿಸಲಾಗಿದೆ.

ಎನ್‌ಐಇಪಿಐಡಿ ನಿರ್ದೇಶಕ ಬಿ.ವಿ. ರಾಮಕುಮಾರ್, ಸಿಆರ್‌ಸಿ ನಿರ್ದೇಶಕರಾದ ಮೀನಾಕ್ಷಿ, ಸಂಪನ್ಮೂಲ ವ್ಯಕ್ತಿಯಾಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್‌ಕುಮಾರ್, ಸಿಆರ್‌ಸಿ ಸಂಯೋಜಕ ವಿ. ಕನಗ ಸಭಾಪತಿ ಆಗಮಿಸುವರು.

## ಹೊನ್ನಾಳಿಯಲ್ಲಿಂದು ಕ್ಯಾನ್ಸರ್ ತಪಾಸಣೆ

ಹೊನ್ನಾಳಿ, ಮಾ.6- ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಾಳೆ ದಿನಾಂಕ 7ರ ಗುರುವಾರ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ ಎಂದು ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ಶಿಬಿರ ಆಯೋಜಕ ಜಿ. ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸ್ಥೆಯು ಕ್ಯಾನ್ಸರ್, ಗರ್ಭಕೋಶ, ಅನ್ನನಾಳ, ಕಿಡ್ನಿ, ಬಾಯಿ, ಸೇರಿದಂತೆ ಇತರೆ ಸಮಸ್ಯೆಗಳಿಗೆ ನುರಿತ ತಜ್ಞರಿಂದ ಯಶಸ್ವೀ ಚಿಕಿತ್ಸೆ ನೀಡುತ್ತಿದೆ ಎಂದು ಹೇಳಿದರು. ಸಂತೋಷ, ನಾಗೇಂದ್ರಪ್ಪ ಸುದ್ದಿಗೋಷ್ಠಿಯಲ್ಲಿದ್ದರು.






# ಸಂಗೀತ, ಸಾಹಿತ್ಯಕ್ಕೆ ಮಾತ್ರ ಮನಸ್ಸು ಬೆಸೆಯುವ ಶಕ್ತಿ : ಮಹಿಮ ಪಟೇಲ್

ದಾವಣಗೆರೆ, ಮಾ. 6 - 'ಕದಡಿದ ಮನಸ್ಸುಗಳನ್ನು ಬೆಸೆಯುವ ಶಕ್ತಿ ಸಂಗೀತ ಮತ್ತು ಸಾಹಿತ್ಯಕ್ಕೆ ಮಾತ್ರ ಇದೆ ಎಂದು ಮಾಜಿ ಶಾಸಕ ಮಹಿಮಾ ಜೆ. ಪಟೇಲ್ ಪ್ರತಿಪಾದಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಸೋಮವಾರ ನಡೆದ ಕತ್ತಲಿನ ಹಾಡು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

'ಆಧುನಿಕ ಸಮಾಜದಲ್ಲಿ ಮನುಷ್ಯ ದಿನ ನಿತ್ಯ ರಾಜಕಾರಣ, ಹಣದ ಹಿಂದೆಯೇ ಓಡುತ್ತಿದ್ದಾನೆ. ನಮ್ಮನ್ನು ನಾವು ಉಳಿಸಿಕೊಳ್ಳುವುದೇ ಇವತ್ತಿನ ಬದುಕಿನ ಸವಾಲಾಗಿಸಿದೆ. ಪರಸ್ಪರ ದ್ವೇಷ, ಅಸೂಯೆ ಹೆಚ್ಚಾಗಿ ಯಾರಲ್ಲೂ ನೆಮ್ಮದಿ ಉಳಿದಿಲ್ಲ. ಇದು ಕೇವಲ ಕರ್ನಾಟಕದ ಭಾರತದ ಸಮಸ್ಯೆಯಲ್ಲ ಇಡೀ ವಿಶ್ವದ ಸಮಸ್ಯೆಯಾಗಿದೆ. ಸಮಾಜದಲ್ಲಿ ಕೇವಲ ಬದಲಾವಣೆ ಆದರೆ ಸಾಲದು ಪರಿವರ್ತನೆ ಆಗಬೇಕು. ಜಾತಿ, ಸ್ವಾರ್ಥ ರಹಿತವಾಗಿ ಚಿಂತಿಸುವ, ಬದ್ಧತೆ ಹೊಂದಿರುವ ಕೆಲವೇ ಜನ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಸಮಾಜದಲ್ಲಿ ಪರಿವರ್ತನೆ ತರಬಹುದು. ಸಮಾಜಕ್ಕೆ ಕೊಡುಗೆ ಕೊಡಲು ವಿದ್ಯಾವಂತರು, ಪ್ರಬುದ್ಧರು ಮುಂದಾಗಬೇಕಿದ್ದು, ಈ ನಿಟ್ಟಿನಲ್ಲಿ ಸಮಾನ ಮನಸ್ಕರನ್ನು ಒಗ್ಗೂಡಿಸುವ ಪ್ರಯತ್ನ ಸಾಗಿದೆ ಎಂದರು.



ಸಮಾಜ ಹೇಗಿದೆಯೋ ಹಾಗೆಯೇ ಸ್ವೀಕರಿಸಿ, ಅದಕ್ಕೆ ನಾವೇನಾದರೂ ಕೊಡುಗೆ ನೀಡುವ ಸಾಧ್ಯತೆ ಕುರಿತು ಚಿಂತಿಸಬೇಕಿದೆ. ವಿಶ್ವಾದ್ಯಂತ ಸ್ವಯಂ ಸೇವೆಯ ಭಾವನೆ ಹೊಂದಿದವರ ಒಗ್ಗೂಡಿಸುವ ಯತ್ನ ನಡೆಸಲು ಚಿಂತಿಸಲಾಗಿದೆ. ಪ್ರೀತಿ, ಸಂತೋಷಗಳು ಮನುಷ್ಯನ ಮೂಲ ಸ್ವಭಾವ. ದ್ವೇಷ, ಅಸೂಯೆ, ನಿಂದನೆ ಇವು ಶಾಶ್ವತವಲ್ಲ ಎಂದರು.

ಕರುಣಾ ಜೀವ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಆರೋಗ್ಯ ಮತ್ತು ಆನಂದ ಸಮಾಜದಿಂದ ಕಣ್ಮರೆಯಾಗಿವೆ. ಯುವಕರು ದುಶ್ಚಟಕ್ಕೆ ಬಲಿಯಾಗಿ, ಬಹು ಚಿಕ್ಕ ವಯಸ್ಸಿನಲ್ಲಿಯೇ ವಿವಿಧ ರೋಗಗಳಿಂದ ನರಳುತಿದ್ದಾರೆ. ಸಜ್ಜನರ ನಿಷ್ಕ್ರಿಯತೆ, ದುರ್ಜನರ ಕ್ರಿಯಾಶೀಲತೆ ಸಮಾಜಕ್ಕೆ ಅಪಾಯಕರ. ಅಸೂಯೆ, ಅಜ್ಞಾನಗಳಿಂದ ಸಮಾಜ ದುರ್ಬಲವಾಗಿದೆ. ಆರೋಗ್ಯವಂತ ಸಮಾಜ ನಿರ್ಮಾಣಕ್ಕಾಗಿ ಎಲ್ಲರಿಗೂ ಆರೋಗ್ಯ ಎಲ್ಲರಿಗೂ ಅರಿವು ನಮ್ಮ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕರುಣಾ ಕಲ್ಯಾಣ ಜೀವ ಟ್ರಸ್ಟ್, ಜೆ. ಎಚ್. ಪಟೇಲ್ ಫೌಂಡೇಶನ್‌ಗಳು ಕಾರ್ಯಕ್ರಮ ಪ್ರಾಯೋಜಿಸಿದ್ದವು.

## ಮನ ಸೆಳೆದ ವಿಶಿಷ್ಟ ಕಾರ್ಯಕ್ರಮ

ಯಾವುದೇ ಅಬ್ಬರದ ಮ್ಯೂಸಿಕ್, ಲೈಟಿಂಗ್ ಇರಲಿಲ್ಲ. ಸಭಾ ಭವನವನ್ನು ದೀಪಗಳನ್ನು ಆರಿಸಲಾಗಿತ್ತು. ನಸುಗತ್ತಲಿನಲ್ಲಿ ಹಣತೆಯ ಮಂದ ಬೆಳಕಿನ ಮುಂದೆ ನಾದ ಮಣಿ ನಾಲ್ಕೂರು ಸಂಗೀತ ಪ್ರಸ್ತುತ ಪಡಿಸಿದರು. ಏಕತಾರಿಯ ನಾದದೊಂದಿಗೆ ಅನುರಣಿಸಿದ ಸಂತ, ಶರಣ, ಸೂಫಿಗಳ ವಿಶಿಷ್ಟ ಗೀತೆಗಳ ಗಾಯನ ನೂರಾರು ಶ್ರೋತೃಗಳಿಗೆ ಮುದ ನೀಡಿದವು.




## ನಗರದಲ್ಲಿ ನಾಳೆ ಕುರುವತ್ತಿ ಪಾದಯಾತ್ರಿಗಳಿಗೆ ಬೀಳ್ಕೊಡುಗೆ



ದಾವಣಗೆರೆ, ಮಾ.6- ಇದೇ ದಿನಾಂಕ 10ರ ಭಾನುವಾರ ನಡೆಯಲಿರುವ ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕು ಕುರುವತ್ತಿಯ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ನಗರದ ಚೌಕಿಪೇಟೆಯ ಶ್ರೀ ಕುರುವತ್ತಿ ಬಸವೇಶ್ವರ ಸೇವಾ ಸಮಿತಿ ವತಿಯಿಂದ 20ನೇ ವರ್ಷದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ನಾಡಿದ್ದು ದಿನಾಂಕ 8ರಂದು ಬೀಳ್ಕೊಡುಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಕಾರ್ಯಕಾರಿ ಮಂಡಳಿ ನಿರ್ದೇಶಕ ಶಿವಾನಂದಪ್ಪ ತಿಳಿಸಿದ್ದಾರೆ.

ನಾಡಿದ್ದು ದಿನಾಂಕ 8ರಂದು ರಾತ್ರಿ 8 ಕ್ಕೆ ಚೌಕಿಪೇಟೆ ಶ್ರೀ ಗುರು ಶಿವ ಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯುವ 20ನೇ ವರ್ಷದ ಬೀಳ್ಕೊಡುಗೆ ಸಮಾರಂಭದ ಸಾನ್ನಿಧ್ಯವನ್ನು ಕೂಡಲಸಂಗಮದ ಪಂಚಮ ಸಾಲಿ ಗುರುಪೀಠಾಧ್ಯಕ್ಷ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಪುಣ್ಯಕೋಟಿಮಠದ ಶ್ರೀ ಜಗದೀಶ್ವರ ಮಹಾಸ್ವಾಮೀಜಿ ವಹಿಸಲಿದ್ದಾರೆ.

ಪಾದಯತ್ರೆ ಸೇವಾ ಸಮಿತಿಯ ಗೌರವ ಅಧ್ಯಕ್ಷ ಎನ್. ಬಕ್ಕೇಶ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಪಾಲಿಕೆ ಮಾಜಿ ಮೇಯರ್ ಅಜಯ್ ಕುಮಾರ್, ಸದಸ್ಯ ಆರ್.ಎಲ್. ಶಿವಪ್ರಕಾಶ್, ಪಂಚಮಸಾಲಿ ಸಮಾಜದ ಜಿಲ್ಲಾ ಉಪಾಧ್ಯಕ್ಷ ಎಂ.ದೊಡ್ಡಪ್ಪ, ಪಾದಯಾತ್ರೆ ಸಮಿತಿ ಉಪಾಧ್ಯಕ್ಷ ವಿ.ಮಹಾಂತೇಶ್, ಅಧ್ಯಕ್ಷ ಕೆ.ಎ. ಸತ್ಯನಾರಾಯಣ ಭಾಗವಹಿಸಲಿದ್ದಾರೆ.

ಪಾದಯಾತ್ರೆಯು ಹೊಂಡದ ರಸ್ತೆ ಮೂಲಕ ಯರಗುಂಟೆ, ಆವರಗೊಳ್ಳ, ಕಕ್ಕರಗೊಳ್ಳ, ಕೊಂಡಜ್ಜಿ, ಬುಳ್ಳಾಪುರದ ಮೂಲಕ ಕುರುಬರಹಳ್ಳಿ ಕ್ರಾಸ್, ದುಗ್ಗಾವತ್ತಿ, ವಟ್ಲಳ್ಳಿ, ಕಡತಿ, ನಂದ್ಯಾಲ, ನಿಟ್ಟೂರು ಕ್ರಾಸ್, ಹಲುವಾಗಲದಲ್ಲಿ ಮಧ್ಯಾಹ್ನದ ಊಟ ನಂತರ ಸಂಜೆ 4 ಗಂಟೆಗೆ ಗರ್ಭಗುಡಿ, ಸಿದ್ಧಾಪುರ ಮಾರ್ಗವಾಗಿ ಲಿಂಗನಾಯ್ಕನಹಳ್ಳಿ ಮೂಲಕ ಶ್ರೀ ಕುರುವತ್ತಿ ಸುಕ್ಷೇತ್ರ ತಲುಪಲಿದೆ ಎಂದವರು ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪಾದಯಾತ್ರೆ ಸೇವಾ ಸಮಿತಿ ಪದಾಧಿಕಾರಿಗಳಾದ ಕೆ.ಬಿ. ಶಿವಕುಮಾರ್, ಆರ್.ಬಸವರಾಜಪ್ಪ, ಹೆಚ್.ಚನ್ನಬಸಪ್ಪ, ಗಿರೀಶ್ ಬಿ.ಆರ್., ಸಚಿನ್ ಇತರರಿದ್ದರು.

## ಚಿತ್ರದುರ್ಗ ಮುರುಘಾಮಠದ ಅಧ್ಯಕ್ಷರಾಗಿ ಶಿವಯೋಗಿ ಕಳಸದ ಅಧಿಕಾರ ಸ್ವೀಕಾರ



ಚಿತ್ರದುರ್ಗ,ಮಾ.6- ಸರ್ವೋಚ್ಚ ನ್ಯಾಯಾಲಯ ಹಾಗು ಕರ್ನಾಟಕ ಸರ್ಕಾರದ ಆದೇಶದನ್ವಯ ನಿವೃತ್ತ ಐ.ಎ.ಎಸ್. ಅಧಿಕಾರಿ ಶಿವಯೋಗಿ ಸಿ. ಕಳಸದ ಅವರು ಇಲ್ಲಿನ ಮುರುಘಾ ಮಠ ಮತ್ತು ಎಸ್.ಜೆ.ಎಂ. ವಿದ್ಯಾಪೀಠದ ಅಧ್ಯಕ್ಷರಾಗಿ ಇಂದು ಅಧಿಕಾರ ವಹಿಸಿಕೊಂಡರು.

ಶ್ರೀ ಮುರುಘಾಮಠದಲ್ಲಿ ಮಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಕಳಸದ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಶ್ರೀ ಬಸವಪ್ರಭು ಸ್ವಾಮಿಗಳು, ಎಸ್.ಎಂ.ಎಲ್ ತಿಪ್ಪೇಸ್ವಾಮಿ ಹಾಗು ಎಸ್.ಜೆ.ಎಂ. ವಿದ್ಯಾಪೀಠದ ನೌಕರ ವರ್ಗದವರು ಈ ಸಂದರ್ಭದಲ್ಲಿ ಹಾಜರಿದ್ದರು. ನಂತರ ಕಳಸದ ಅವರು ಸಂಸ್ಥೆಯ ಕಾಲೇಜುಗಳಿಗೆ ಭೇಟಿ ನೀಡಿದರು.

## ದೊಡ್ಡಬಾತಿಯಲ್ಲಿ ಛೇರ್ಮನ್ ಕೆ.ಜಿ. ಚಂದ್ರಣ್ಣ ವೃತ್ತ ಉದ್ಘಾಟನೆ



ದಾವಣಗೆರೆ, ಮಾ.6- ದೊಡ್ಡಬಾತಿಯಲ್ಲಿ ದಾವಣಗೆರೆ - ಹರಿಹರ ರಸ್ತೆಯಲ್ಲಿನ ಮುಖ್ಯ ವೃತ್ತಕ್ಕೆ ಛೇರ್ಮನ್ ಕೆ.ಜಿ. ಚಂದ್ರಣ್ಣ ವೃತ್ತ ಎಂದು ನಾಮಕರಣ ಮಾಡಿ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಉದ್ಘಾಟಿಸಿದರು.

ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ತಹಶೀಲ್ದಾರ್ ಎಂ.ಬಿ. ಅಶ್ವತ್ಥ್, ಇಒ ರಾಮಭೋವಿ, ಛೇರ್ಮನ್ ಕೆ.ಜಿ.ಚಂದ್ರಣ್ಣನವರ ಪುತ್ರ ಹಾಗೂ ದೊಡ್ಡಬಾತಿ ಕಾಂಗ್ರೆಸ್ ಮುಖಂಡ ಕೆ.ಜಿ. ಉಮೇಶ್, ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಟಿ. ಮಂಜುಳ, ಆರ್. ಸೀತಮ್ಮ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮುದೇಗೌಡ್ರ ಗಿರೀಶ್, ಬೇತೂರು ಕರಿಬಸಪ್ಪ, ಮುಖಂಡರಾದ ಮಾಗಾನಹಳ್ಳಿ ಪರಶುರಾಮ್, ಜೆಸಿಬಿ ಹನುಮಂತಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ಆಸಕ್ತಿ, ಬುದ್ಧಿವಂತಿಕೆಗೆ ತಕ್ಕಂತೆ ಪ್ರೋತ್ಸಾಹಬೇಕು



**ಬಾಪೂಜಿ ಶಾಲೆ 'ಉತ್ಸವ್ ಚಿಣ್ಣರ ಘಟಿಕೋತ್ಸವ'ದಲ್ಲಿ ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ**

ದಾವಣಗೆರೆ,ಮಾ.6- ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ (ಸಿ.ಬಿ.ಎಸ್.ಇ) ಶಾಲೆಯಲ್ಲಿ 'ಉತ್ಸವ್ ಚಿಣ್ಣರ ಘಟಿಕೋತ್ಸವ' ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತ ಮಾತನಾಡಿ, ವಿದ್ಯಾರ್ಥಿಗಳ ಆಸಕ್ತಿ ಹಾಗೂ ಬುದ್ಧಿವಂತಿಕೆಗೆ ತಕ್ಕಂತೆ ನಾವೆಲ್ಲರೂ ಪ್ರೋತ್ಸಾಹ ನೀಡಬೇಕು ಮತ್ತು ವಿದ್ಯಾರ್ಥಿಗಳು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗುವಂತೆ ಶ್ರೇಷ್ಠ ಶಿಕ್ಷಣವನ್ನು ಧಾರೆ ಎರೆಯಬೇಕೆಂದು ಹೇಳಿದರು.

ಶಾಲೆಯ ಮುಖ್ಯಸ್ಥರಾದ ಮಂಜುನಾಥ ರಂಗರಾಜು ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರಹಾಕಲು ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು. ಪ್ರತಿ ಯೊಬ್ಬ ವಿದ್ಯಾರ್ಥಿಯಲ್ಲಿಯೂ ಸಹ ತನ್ನದೇ ಆದ ಸಾಮರ್ಥ್ಯವಿದ್ದು ಅದನ್ನು ಎಲ್ಲರೂ ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ವನಿತಾ ಜೆ.ಎಸ್ ಮಾತನಾಡಿ, ವಿದ್ಯಾರ್ಥಿಗಳ ಆಸೆ ಮತ್ತು ಆಕಾಂಕ್ಷೆಗಳಿಗೆ ಅವಕಾಶ ಮಾಡಿಕೊಟ್ಟು ಅಕ್ಷರ ಅಭ್ಯಾಸವನ್ನು ಮಾಡಿಸಬೇಕು. ಅಲ್ಲದೇ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ, ಅವರ ಸಾಮರ್ಥ್ಯಕ್ಕೆ ತಕ್ಕಂತೆ ಶಿಕ್ಷಣ ಕೊಡಬೇಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಶೈಕ್ಷಣಿಕ ಮಾರ್ಗದರ್ಶಕ ಮಂಜಪ್ಪ ಸಿ, ಪ್ರೌಢಶಾಲಾ ವಿಭಾಗದ ಪ್ರಭಾರಿಗಳಾದ ಪ್ರಭು ಪಿ.ವಿ, ಶ್ರೀಮತಿ ಸವಿತಾ ರಮೇಶ್, ಪ್ರಾಥಮಿಕ ವಿಭಾಗದ ಪ್ರಭಾರಿಗಳಾದ ಶ್ರೀಮತಿ ಶೀಭಾರಾಣಿ ಮತ್ತಿತರರು ಉಪಸ್ಥಿತರಿದ್ದರು.

ಪ್ರಾರ್ಥನೆ ಗೀತೆಯನ್ನು ಸಮಯ ಮತ್ತು ಸಂಗಡಿಗರು ಹಾಡಿದರು. ಅನಿಕಾ, ದೇವಿಕಾ, ನೀತಿ ಮತ್ತು ಸಂಗಡಿಗರು ನೃತ್ಯ ಮಾಡಿದರು. ನಿರೂಪಣೆಯನ್ನು ಸಾರಾ ಮತ್ತು ಅಶ್ವಿನಿ ನಡೆಸಿಕೊಟ್ಟರು.

## ಕೊನೆಗೂ ಸಿಬಿಐಗೆ ಶಹಜಹಾನ್ ಶೇಖ್ ಹಸ್ತಾಂತರ



ಕೊಲ್ಕೊತಾ, ಮಾ. 6 – ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಮೇಲೆ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ ಮುಖಂಡ ಶಹಜಹಾನ್ ಶೇಖ್ ರನ್ನು ಸಿ.ಬಿ.ಐ. ವಶಕ್ಕೆ ಪಡೆದುಕೊಳ್ಳಲಾಗಿದೆ. ಕಲ್ಕತ್ತಾ ಹೈಕೋರ್ಟ್ ಆದೇಶದ ಮೇಲೆ ಪಶ್ಚಿಮ ಬಂಗಾಳದ ಸಿ.ಐ.ಡಿ. ಆರೋಪಿಯನ್ನು ಹಸ್ತಾಂತರಿಸಿದೆ.

ಶೇಖ್ ಹಸ್ತಾಂತರಕ್ಕೆ ಹೈಕೋರ್ಟ್ ನಿನ್ನೆಯೂ ಆದೇಶ ಹೊರಡಿಸಿತ್ತು. ಆದರೆ, ಹಸ್ತಾಂತರವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಬುಧವಾರ ಮತ್ತೊಂದು ಆದೇಶ ಹೊರಡಿಸಿತು. ನಂತರ ಆರೋಪಿಯನ್ನು ಹಸ್ತಾಂತರಿಸಲಾಗಿದೆ.

ಆರೋಪಿಯನ್ನು ಸಿ.ಬಿ.ಐ.ಗೆ ವಹಿಸಬೇಕು ಎಂದು ಹೈಕೋರ್ಟ್ ಆದೇಶ ಹೊರಡಿಸಿತ್ತು. ಆ ಆದೇಶ ಪಾಲನೆಯಾಗಿರಲಿಲ್ಲ. ನಂತರ ಮತ್ತೊಂದು ಆದೇಶ ಹೊರಡಿಸಿದ ಹೈಕೋರ್ಟ್, ತಕ್ಷಣವೇ ಹಸ್ತಾಂತರ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿತು.

ಸಂಜೆ 4.15 ಗಂಟೆಯ ಒಳಗಾಗಿ ಆರೋಪಿಯನ್ನು ಹಸ್ತಾಂತರಿಸುವಂತೆ ತಿಳಿಸಲಾಗಿತ್ತು. ಆದರೂ ಸಂಜೆ 6.48ರ ಸಮಯದಲ್ಲಿ ಆರೋಪಿಯನ್ನು ಹಸ್ತಾಂತರಿಸಲಾಗಿದೆ.

ಹಸ್ತಾಂತರದ ಹೈಕೋರ್ಟ್ ಆದೇಶ ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ಆದರೆ, ತ್ವರಿತ ವಿಚಾರಣೆಗೆ ನಿರಾಕರಿಸಿದ ಸುಪ್ರೀಂ ಕೋರ್ಟ್, ರಿಜಿಸ್ಟ್ರಾರ್ ಜನರಲ್ ಬಳಿ ಮನವಿ ದಾಖಲಿಸುವಂತೆ ತಿಳಿಸಿತು.

ಸಂದೇಶ್‌ಖಾಲಿಯಲ್ಲಿ ಹಲವಾರು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಆರೋಪವೂ ಶೇಖ್ ಮೇಲಿದೆ. ಈ ಪ್ರಕರಣದ ಬಗ್ಗೆ ಪಶ್ಚಿಮ ಬಂಗಾಳದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಹಳೇಪೇಟೆ ವೀರಭದ್ರೇಶ್ವರ ದೇವಸ್ಥಾನದ ಸಮುದಾಯ ಭವನಕ್ಕೆ ಭೂಮಿ ಪೂಜೆ



ದಾವಣಗೆರೆ, ಮಾ. 6 - ನಗರದ ಹಳೇಪೇಟೆಯಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಶ್ರೀ ಕುದುರೆ ಮಹಾಲಿಂಗಪ್ಪ ಕಲ್ಯಾಣ ಮಂಟಪವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಸಮುದಾಯ ಭವನ ಪುನರ್ ನಿರ್ಮಾಣಕ್ಕೆ ಭೂಮಿ ಪೂಜಾ ಸಮಾರಂಭವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಅವರು ನಿನ್ನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮೇಯರ್ ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯರಾದ ಎ. ನಾಗರಾಜ್, ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ, ಗೌಡ್ರು ಚನ್ನಬಸಪ್ಪ, ಕುದುರೆ ಕರಿಬಸಪ್ಪ, ಹರಿಹರದ ಕರಿಬಸಪ್ಪ, ಕುದುರೆ ವಿಶ್ವನಾಥ್, ಎಂ.ಕೆ. ಬಕ್ಕಪ್ಪ, ಕಿರುವಾಡಿ ಸೋಮಶೇಖರ್, ಮಲ್ಲಾಬಾದಿ ಗುರುಬಸವರಾಜ್, ಕೋಡಬಾಳ್ ಚನ್ನಬಸಪ್ಪ ಮೆರವಣಿಗೆ ನಿರಂಜನ, ಮೆರವಣಿಗೆ ಜಯವಿಭವ, ಎನ್.ಕೆ. ಕೊಟ್ರೇಶ್, ಆರ್. ವಿ. ಕೊಟ್ರೇಶ್, ಸುರೇಶಪ್ಪ ಹರವಿ ಮತ್ತು ಶ್ರೀ ವೀರಭದ್ರೇಶ್ವರ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

## ಲೇಬರ್ ಕಾಲೋನಿ ಶ್ರೀ ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಿವರಾತ್ರಿ ಜಾಗರಣೆ



ದಾವಣಗೆರೆ, ಮಾ. 6 - ನಗರದ ಲೇಬರ್ ಕಾಲೋನಿಯ ಶ್ರೀ ಕರಿಬಸವೇಶ್ವರ ಸ್ವಾಮಿ ದೇವ ಸ್ಥಾನ ಸಮಿತಿ ವತಿಯಿಂದ ಇದೇ 10 ರಂದು ಸಂಜೆ 7 ಕ್ಕೆ ಜಾಗರಣೆ ಪ್ರಯುಕ್ತ ಭಜನೆ ಏರ್ಪಡಿಸಲಾಗಿದೆ. ಇದೇ ದಿನಾಂಕ 11 ರ ಸೋಮವಾರ ಬೆಳಿಗ್ಗೆ 6 ಗಂಟೆಗೆ ಸ್ವಾಮಿಗೆ ಮಹಾರುದ್ರಾಭಿಷೇಕ ನಂತರ 9ಕ್ಕೆ ಸ್ವಾಮಿಯ ಮೆರವಣಿಗೆ, ಮಧ್ಯಾಹ್ನ 12.30ಕ್ಕೆ ಮಹಾಪ್ರಸಾದ ನಡೆಯಲಿದೆ. ದಿನಾಂಕ 12ರ ಮಂಗಳವಾರ ಬೆಳಿಗ್ಗೆ ಪೂಜೆಯ ನಂತರ ಪಳಾರ ಹಾಕಿಸುವುದು. ದಿನಾಂಕ 14ರ ಗುರುವಾರ ಸಂಜೆ 6.30ಕ್ಕೆ ಪಳಾರ ಹಂಚಲಾಗುವುದು ಎಂದು ದೇವಸ್ಥಾನದ ವ್ಯವಸ್ಥಾಪಕ ಪಿ.ಎನ್. ಲೋಕೇಶಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಭಾರತ್ ರೈಸ್ ಮಾರಾಟ



ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಇಂದು ಬೆಳಗ್ಗೆ 10.30 ಕ್ಕೆ ಕೇಂದ್ರ ಸರ್ಕಾರದ 'ಭಾರತ್ ರೈಸ್' ಯೋಜನೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸಲಿದ್ದಾರೆ. ಈ ಯೋಜನೆಯ ಮೂಲಕ ಕೇವಲ 29 ರೂ.ಗಳಿಗೆ ಒಂದು ಕೆಜಿ ಅಕ್ಕಿಯನ್ನು ಪಡೆಯಬಹುದು.

ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಪೂರಾಳು ತಿಪ್ಪೇಸ್ವಾಮಿ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು... ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ...

ಪತ್ನಿ : ಭಾರತಿ ಸ್ವಾಮಿ ಪೂರಾಳ್
ಪುತ್ರಿ : ಪೂರ್ವಿಕಾ ಪೂರಾಳ್
ಮತ್ತು ಪೂರಾಳು ಕುಟುಂಬಸ್ಥರು, ಬಂಧು-ಮಿತ್ರರು.

ಹುಟ್ಟು ಹಬ್ಬದ ಶುಭಾಶಯಗಳು



ಮಹಾರಾಜ ಸೋಪ್ಸ್ ಇಂಡಸ್ಟ್ರೀಸ್‌ನ
ಕಾರ್ತಿಕ್ ರಾಜ್
ಎಂ.ಇ ಅವರಿಗೆ
ಹುಟ್ಟು ಹಬ್ಬದ ಶುಭಾಶಯಗಳು.
ರಾಜು ಬಸಪ್ಪ

ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ.,
'ಕರಾವಳಿ ಸೌಧ', ಕುಂದುವಾಡ ರಸ್ತೆ, ಡಾ.ಶ್ಯಾಮಸುಂದರ್ ಬಂಟರ ಭವನದ ಎದುರು, ದಾವಣಗೆರೆ.
ದೂರವಾಣಿ : 99008 70019, 98441 11334.
ದಿನಾಂಕ 01-10-2023 ರಿಂದ ಎಲ್ಲಾ ಆಸ್ತಿ ಆಧಾರಿತ ಸಾಲಗಳ ಮೇಲಿನ ಬಡ್ಡಿ ದರವನ್ನು ಶೇ.13 ಕ್ಕೆ ಇಳಿಸಲಾಗಿದೆ.
ಉತ್ತಮ ಆದಾಯದ ಮೂಲವನ್ನು ಹೊಂದಿರುವ ಗ್ರಾಹಕರು
ಆಸ್ತಿ ಆಧಾರಿತ ಸಾಲಕ್ಕಾಗಿ ಮೇಲಿನ ವಿಳಾಸದಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.




ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ವಾಸಿ
ಲಿಂ. ಶ್ರೀಮತಿ ಗಂಗಾ ಕೋಗುಂಡಿ ಮಠ ದಾವಣಗೆರೆ, ಡಾ|| ಕೆ.ಪಿ. ಬಕ್ಕೇಶ್ವರ ಸ್ವಾಮಿ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ 05.03.2024ನೇ ಮಂಗಳವಾರ
ಮಧ್ಯಾಹ್ನ 2.00ಕ್ಕೆ
ನನ್ನ ಪೂಜ್ಯ ಧರ್ಮಪತ್ನಿಯವರಾದ
ಶ್ರೀಮತಿ ಗಂಗಾ ಕೋಗುಂಡಿಮಠ
ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 07.03.2024ನೇ ಗುರುವಾರ ಮಧ್ಯಾಹ್ನ 1 ಗಂಟೆಗೆ ಡೋರ್ ನಂ. 194/3B ಎನ್.ಆರ್. ರಸ್ತೆ, ದಾವಣಗೆರೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
: ದುಃಖತಪ್ತ ಕುಟುಂಬ ವರ್ಗ :
ಡಾ|| ಕೆ.ಪಿ. ಬಕ್ಕೇಶ್ವರಸ್ವಾಮಿ ಮತ್ತು ಮಕ್ಕಳಾದ ವಿದ್ಯಾ ಹಾಗೂ ವಿನಯ್
ಮೊ : 99861 77882, 91483 90040